ಬಂಟರ ಸಂಘ ಬೆಂಗಳೂರು
BUNTS' SANGHA BANGALORE
www.buntsanghablr.com

# ಸ್ನೇಹ ಚಿಂತನ

ಮಾಸ ಪತ್ರಿಕೆ

ಡಿಸೆಂಬರ್ 2022 ಸಂಪುಟ 18
ಸಂಚಿಕೆ 12
ಸಂಚಿಕೆ ಬೆಲೆ ರೂ. 1/–






ಸೇವಾ ಚೇತನ–2022






ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ
ವಾರ್ಷಿಕ ಕ್ರೀಡಾಕೂಟದ ಉದ್ಘಾಟನಾ ಸಮಾರಂಭ



324, Chord Road, Vijayanagara
Bengaluru - 560 040.
Ph: 080 2339 9323/ 2339 9635
E: info@buntsanghablr.com

CREDAI BENGALURU

ANIKA redwood homes



## Ready to Move in 2/3 BHK Apartments for the discerning few



AVAIL ATTRACTIVE NEW YEAR OFFERS



*We put up the walls and beams*
*You build it with love and dreams*

Anika Redwood Homes,
Coconut Garden, Nagarabhavi Main Road,
Bengaluru,
Karnataka - 560072

PRM/KA/RERA/1251/310/PR/190108/002281
PRM/KA/RERA/1251/309/PR/180406/001483

ANIKA DEVELOPERS

CONTACT US

+91 9901991111
+91 9845076189
+91 7406633111

https://www.anikadevelopers.com
info@anikadevelopers.com

Anika Developers, # 4912, 19th Floor, High point IV #45, Palace Road, Bengaluru 560001

# ಸ್ನೇಹ ಚಿಂತನೆ

*Monthly Magazine Published by*
**BUNTS' SANGHA BANGALORE**

**VOL 18** **DECEMBER 2022** **ISSUE 12**

**ಸಾಹಿತ್ಯ ಮತ್ತು ಪ್ರಕಾಶನ ಸಮಿತಿ**
ಚೇರ್‌ಪರ್ಸನ್ ಮತ್ತು ಗೌ॥ ಸಂಪಾದಕರು :
ಶ್ರೀ ಅರವಿಂದ ಶೆಟ್ಟಿ ಎಂ.

**ಸಲಹಾ ಮಂಡಳಿ :**
ಶ್ರೀ ಸತ್ಯಾನಂದ ಮೇಲಾಂಟ ಎನ್.

**ಸಂಪಾದಕ ಮಂಡಳಿ :**
ಶ್ರೀ ಸತೀಶ್ ಶೆಟ್ಟಿ ವಕ್ವಾಡಿ
ಶ್ರೀಮತಿ ಜಯಲಕ್ಷ್ಮೀ ಸಿ. ಶೆಟ್ಟಿ
ಶ್ರೀಮತಿ ಶ್ಯಾಮಲ ಶೆಟ್ಟಿ
ಶ್ರೀಮತಿ ನಿರ್ಮಲಾ ಸಿ. ರೈ
ಶ್ರೀ ಡಾ। ಶಾಲ್ಮಲೀ ಸುರೇಶ್
ಶ್ರೀ ರವೀಂದ್ರ ಶೆಟ್ಟಿ ಹಟ್ಟಿಯಂಗಡಿ
ಶ್ರೀಮತಿ ಆರತಿ ಸುರೇಶ್ ಶೆಟ್ಟಿ
ಶ್ರೀಮತಿ ಅನುಷಾ ಶೆಟ್ಟಿ
ಶ್ರೀ ಪ್ರದೀಪ್ ಕುಮಾರ್ ಹೆಗ್ಡೆ
ಶ್ರೀ ಜಯರಾಮ ಶೆಟ್ಟಿ, ನೂಜಾಡಿ
ಶ್ರೀ ಪ್ರಕಾಶ್ ರೈ
ಶ್ರೀ ಪ್ರದೀಪ್‌ರಾಜ್ ಶೆಟ್ಟಿ

**ಪೋಷಕ ಸದಸ್ಯರು :**
ಶ್ರೀಮತಿ ಮನೋರಮ ಚೌಟ
ಶ್ರೀಮತಿ ವೇದ ಎಸ್. ಶೆಟ್ಟಿ
ಶ್ರೀ ಬಿ. ಕುಸುಮಾಕರ ಶೆಟ್ಟಿ
ಶ್ರೀ ಆರ್.ಎಸ್. ಶೆಟ್ಟಿ
ಶ್ರೀಮತಿ ವಸಂತಿ ಪಿ. ಶೆಟ್ಟಿ
ಶ್ರೀ ಪ್ರಕಾಶ್ ಶೆಟ್ಟಿ
ಶ್ರೀ ಎ.ಜೆ. ಶೆಟ್ಟಿ
ಶ್ರೀಮತಿ ಗೀತ ಭಗವಾನ್‌ದಾಸ್ ರೈ
ಶ್ರೀ ಕೆ. ಶಂಕರ್ ಶೆಟ್ಟಿ ಹುಬ್ಬಳ್ಳಿ
ಶ್ರೀ ಶ್ರೀನಿವಾಸ ಸೂಡ

**ಪ್ರಕಾಶಕರು :**
ಶ್ರೀ ಆನಂದರಾಮ ಶೆಟ್ಟಿ ಬಿ.

ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದ್ದು, ಇದರಲ್ಲಿ ಬಂಟರ ಸಂಘಕ್ಕೆ ಯಾವುದೇ ತೆರನಾದ ಜವಾಬ್ದಾರಿ ಇರುವುದಿಲ್ಲ. **– ಸಂಪಾದಕ ಮಂಡಳಿ**

## ಒಳ ಪುಟಗಳಲ್ಲಿ.....

| | **ಪುಟ** |
|---|---|
| ಸಂಪಾದಕೀಯ | 2 |
| ಅಧ್ಯಕ್ಷರ ಮಾತು | 3 |
| ಗೌರವ ಕಾರ್ಯದರ್ಶಿಗಳ ವರದಿ | 4 |
| ಕ್ರೀಡಾ ಸಮಿತಿ – ಕ್ರೀಡಾ ಸಾಧನಾ ಪ್ರಶಸ್ತಿಗಳಿಗೆ ಅರ್ಜಿ ಆಹ್ವಾನ | 7 |
| ರಸ್ತೆ ಅಪಘಾತಗಳ ತಡೆ ಹೇಗೆ? | 10 |
| ಯಕ್ಷ ಬಂಡಿಗೆ ಬಂಟರ ಕೊಂಡಿ | 12 |
| ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಕ್ರೀಡಾಕೂಟದ ಉದ್ಘಾಟನಾ ಸಮಾರಂಭ | 34 |
| ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರ | 36 |

**ಮುಖ ಪುಟ**

ಸೇವಾ ಚೇತನ – 2022
ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಕ್ರೀಡಾಕೂಟದ ಉದ್ಘಾಟನಾ ಸಮಾರಂಭ

# ಸಂಪಾದಕೀಯ

## ಪ್ರಾರ್ಥನೆ



ಸರ್ವೇ ಜನಾಃ ಸುಖಿನೋ ಭವಂತು,
ಸರ್ವೇ ಸಂತು ನಿರಾಮಯಾಃ।
ಸರ್ವೇ ಭದ್ರಾಣಿ ಪ್ರಶ್ಚಂತು
ಮಾಕಶ್ಚಿದ್ದುಃಖಭಾಗ್‌ಭವೇತ್॥

ಈ ಒಂದು ಸಂಸ್ಕೃತ ಪ್ರಾರ್ಥನೆ ಎಂತಹ ಶಕ್ತಿಭರಿತವಾದದ್ದು. ಎಲ್ಲರಿಗೂ ಸಂತೋಷ ಸಿಗಲಿ, ಎಲ್ಲರೂ ರೋಗಮುಕ್ತರಾಗಲಿ ಎಂಬ ಒಂದು ಮುಕ್ತ ಪ್ರಾರ್ಥನೆ. ಕೊರೋನಾ ಕಾಲದಲ್ಲಿ ಒಂದು ಸುಂದರ ಸಂದೇಶ ಕೂಡ ಆಗಿತ್ತು. ಪ್ರಾರ್ಥನೆ ಶಬ್ಧದ ಶಾಸ್ತ್ರೀಯ ರೂಪ ಪ್ರಕರ್ಷೇಣ ಯಾಚನಂ ಅಂದರೆ ಒಳ್ಳೆಯ ರೀತಿಯಿಂದ ಒಳ್ಳೆಯ ಶಕ್ತಿಯಲ್ಲಿ ಅಥವಾ ಒಳ್ಳೆಯ ವ್ಯಕ್ತಿಯಲ್ಲಿ ಯಾಚಿಸುವುದು, ಬೇಡುವುದು ಎಂದರ್ಥ.

ಪ್ರಾರ್ಥನೆಯನ್ನು ಪ್ರತಿಯೊಬ್ಬರು ಅವರವರ ಅರಿವಿಗೆ ಬಂದ ರೀತಿಯಲ್ಲಿ ಮಾಡುತ್ತಾರೆ. ಪ್ರಾರ್ಥನೆ ಹೇಗಿರಬೇಕು ಮತ್ತು ಯಾಕೆ ಮಾಡಬೇಕು ಎಂಬ ಪ್ರಶ್ನೆ ಬಂದಾಗ; ಪ್ರಾರ್ಥನೆ ಹೇಗಿರಬೇಕು ಎಂದರೆ ತಾನೆಂಬುದನ್ನು ಮರೆತು ಭಗವಂತನೇ ಎಲ್ಲಾ ಎನ್ನುವ ಮನಸ್ಸಿಂದ ಯಾಚಿಸಿದರೆ ಮಾತ್ರ ಅದು ನಿಜವಾದ ಪ್ರಾರ್ಥನೆ ಆಗುವುದು.

ಪ್ರಾರ್ಥಿಸಬೇಕಾದರೆ ಅಲ್ಲಿ ಅನನ್ಯವಾದ ನಂಬಿಕೆಯಿರಬೇಕು. ಅಪನಂಬಿಕೆಯ ಪ್ರಾರ್ಥನೆ ಎಂದಿಗೂ ಫಲ ಕೊಡಲಾರದು. ನಂಬಿಕೆಯೇ ಪ್ರಾರ್ಥನೆಯ ಮೂಲ. ಪ್ರತಿಯೊಂದು ಧರ್ಮದಲ್ಲಿಯೂ ಪ್ರಾರ್ಥನೆ ರೂಢಿಯಲ್ಲಿದೆ. ಆದರೆ ಕೆಲವರು ಮಾತ್ರ ಅಲ್ಲಿ ಗಮನಕೊಡುತ್ತಾರೆ. ಇನ್ನು ಕೆಲವರು ಆ ಬಗ್ಗೆ ಗಮನವನ್ನೇ ನೀಡುವುದಿಲ್ಲ. ಅದರಲ್ಲೂ ಪ್ರಾರ್ಥನೆ ಮಾಡುವ ಕೆಲವರಿಗೆ ತಾವೇಕೆ ಪ್ರಾರ್ಥನೆ ಮಾಡುತ್ತಿದ್ದೇವೆ ಎಂಬ ಅರಿವಿಲ್ಲದೆ ರೂಢಿಯಲ್ಲಿರುವಂತೆ ಪ್ರಾರ್ಥಿಸುತ್ತಾರೆ.

ಪ್ರಾರ್ಥನೆಯ ಫಲ ಹೇಗಿರುತ್ತದೆ ಎಂಬುದಕ್ಕೆ ಒಂದು ಸಣ್ಣ ಉದಾಹರಣೆಯ ಕಥೆ. ಒಬ್ಬ ಬ್ರಾಹ್ಮಣನಿಗೆ ದಿನಾ ತಮ್ಮ ಮನೆಯಲ್ಲಿರುವ ಹಸುವಿನಿಂದ ಕರೆದ ಹಾಲನ್ನು ದೇವಾಲಯದಲ್ಲಿರುವ ಶಿವಲಿಂಗಕ್ಕೆ ಭಕ್ತಿಯಿಂದ ಅಭಿಷೇಕ ಮಾಡಿ ಮನೆಗೆ ಬಂದು ಫಲಾಹಾರ ತಿನ್ನುವುದು ರೂಢಿಯಾಗಿತ್ತು. ಒಂದು ದಿನ ಅವನು ಊರಿನಲ್ಲಿ ಇಲ್ಲದ ಕಾರಣ ಅವನ ಹೆಂಡತಿ ಮಗಳಿಗೆ ಹೇಳಿದಳು, ಇದನ್ನು ಶಿವನಿಗೆ ಅರ್ಪಿಸಿ ಬಂದರೆ ಮಾತ್ರ ಇಂದು ನಿನಗೆ ತಿಂಡಿ. ಆ ಮಗುವು ಹಾಲನ್ನು ತೆಗೆದುಕೊಂಡು ಹೋಗಿ ಶಿವಲಿಂಗದ ಎದುರು ಇಟ್ಟು ಶಿವಾ ಶಿವಾ ಬೇಗ ಬಂದು ಈ ಹಾಲನ್ನು ಕುಡಿ, ಆಗ ನಾನು ಮನೆಗೆ ಹೋಗಿ ತಿಂಡಿ ತಿನ್ನಬಹುದು ಎಂದು ಪ್ರಾರ್ಥಿಸಿ ಅಲ್ಲಿಯೇ ಕುಳಿತಳು. ಆದರೆ ತುಂಬಾ ಹೊತ್ತಾದರೂ ಹಾಲು ಹಾಗೆ ಇರುವುದನ್ನು ನೋಡಿ ಮಗು ಜೋರಾಗಿ ಅಳುತ್ತಾ "ನನಗೆ ಹಸಿವಾಗುತ್ತಿದೆ ನೀನು ಹಾಲು ಕುಡಿದರೆ ಮಾತ್ರ ನನಗೆ ಅಮ್ಮ ತಿಂಡಿ ಕೊಡುತ್ತಾಳೆ ಎಂದು ಬಿಕ್ಕಿ ಬಿಕ್ಕಿ ಅಳುತ್ತಿದ್ದಾಗ ಶಿವ ಮೆಲ್ಲನೆ ಆ ಹಾಲನ್ನು ತೆಗೆದು ಕುಡಿದನು. ಆ ಹುಡುಗಿ ಸಂತೋಷದಿಂದ ಮನೆಗೆ ಬಂದು ತಾಯಿಗೆ ಶಿವ ಹಾಲು ಕುಡಿದ ಎಂದು ಹೇಳಿದಾಗ ನಂಬದ ತಾಯಿ ಮಾರನೆ ದಿವಸ ಮಗಳನ್ನು ಕಳಿಸಿ ಮರೆಯಲ್ಲಿ ನಿಂತು ನೋಡಿದಾಗ ಮಗು ಹೇಳಿದ್ದು ಸತ್ಯದ ಅರಿವಾಗಿತ್ತು.

ಹಾಗೆಯೇ ಇಚ್ಛಿತ ಕಾರ್ಯವನ್ನು ಪ್ರಾರ್ಥನೆ ಮಾಡಿ ಮಾಡಿದಾಗ ಒಳ್ಳೆಯದಾಗುತ್ತದೆ ಎಂಬ ನಂಬಿಕೆಯೇ ಧನಾತ್ಮಕ ಪ್ರಚೋದನೆ ಕೊಟ್ಟು ಯಶಸ್ಸಿಗೆ ಕಾರಣವಾಗುತ್ತದೆ. ಪ್ರಾರ್ಥಿಸುವುದರಿಂದ ಮನಸ್ಸು ಸೂಕ್ಷ್ಮಸ್ಥಿತಿಗೆ ತಲುಪಿ ಮನಃಶಾಂತಿ ದೊರೆಯುತ್ತದೆ. ನಮಗಿಂತ ಮಿಗಿಲಾದ ಶಕ್ತಿಯಿದೆ ಎಂಬ ನಂಬಿಕೆ ಮತ್ತು ಪ್ರಾರ್ಥನೆಯ ಮೂಲ ಉದ್ದೇಶ, ಅಡೆತಡೆಗಳನ್ನು ನಿವಾರಣೆ ಮಾಡು ಮತ್ತು ಸ್ವಾರ್ಥವನ್ನು ಕಡಿಮೆ ಮಾಡು ಎಂದು ಬೇಡಿಕೊಳ್ಳುವುದು. ಮನಃಶಾಸ್ತ್ರವೂ ಪ್ರಾರ್ಥನೆ ಮತ್ತು ಧ್ಯಾನ ಮನಸ್ಸಿಗೆ ನೆಮ್ಮದಿ ನೀಡುವ ಮೂಲ ಎಂಬುದನ್ನು ಸಾಬೀತು ಪಡಿಸಿದೆ.

ಇಂದಿನ ಮಕ್ಕಳಿಗೆ ಎಳೆ ವಯಸ್ಸಿನಲ್ಲಿಯೇ ಪ್ರಾರ್ಥನೆಯಿಂದ ಭಗವಂತನೆಂಬ ಅವ್ಯಕ್ತ ಶಕ್ತಿ ನಮಗೆ ಬೆಂಗಾವಲಾಗಿರುತ್ತದೆ, ಪ್ರಾರ್ಥನೆಯಿಂದ ಸಾಧನೆ ಸುಲಭ ಸಾಧ್ಯ ಎಂಬುದನ್ನು ನೀತಿ ಕಥೆಯ ಮೂಲಕ ಹೇಳಿದರೆ ಅದು ಮಕ್ಕಳ ಮನಸ್ಸಿಗೆ ಪರಿಣಾಮ ಬೀರುತ್ತದೆ. ದೈವ ದೇವರುಗಳನ್ನು ನಂಬಿ ಬಂದ ನಮ್ಮ ಸಮಾಜಕ್ಕೆ ಪ್ರಾರ್ಥನೆಯ ನಿಜವಾದ ಅರ್ಥ ಹಾಗೂ ಅರಿವು ಬಹಳ ಮುಖ್ಯವಾಗಿರುತ್ತದೆ.

**ಅರವಿಂದ ಶೆಟ್ಟಿ ಎಂ.**

# ಅಧ್ಯಕ್ಷರ ಮಾತು



2022ನೇ ವರ್ಷ ಮುಗಿಯುತ್ತಾ ಬರುತ್ತಿದೆ. ಪ್ರತೀ ವರ್ಷದಂತೆ ಹಲವಾರು ಬೆಳವಣಿಗೆಗಳು, ಏರಿಳಿತಗಳು, ಉದ್ಯಮಿಗಳ ಲಾಭ ನಷ್ಟದ ಕಥೆಗಳು, ಬಹು ರಾಷ್ಟ್ರೀಯ ಕಂಪೆನಿಗಳಲ್ಲಿ ಕೆಲಸ ಮಾಡುವವರ ಅನುಭವಗಳು ಒಂದೆಡೆ ಹೊಸ ನೇಮಕಾತಿಗಳು, ಇನ್ನೊಂದೆಡೆ ಸಾವಿರ ಸಾವಿರ ಜನರನ್ನು ಕೆಲಸದಿಂದ ತೆಗೆದು ಹಾಕುವ ವಿಷಯಗಳನ್ನು ಪತ್ರಿಕೆಗಳಲ್ಲಿ ನೋಡುತ್ತಿರುತ್ತೇವೆ. ಆದರೆ ಇದೇ ಅಲ್ಲವೇ ಜೀವನ? ಇಂತಹ ಎಲ್ಲಾ ಸಮಸ್ಯೆಗಳನ್ನು ಎದುರಿಸಿ ಮುನ್ನಡೆಯುವುದೇ ನಮ್ಮ ಗುರಿಯಾಗಿರಬೇಕು.

ಬೆಂಗಳೂರು ಬಂಟರ ಸಂಘದಿಂದ ಇತ್ತೀಚಿನ ದಿನಗಳಲ್ಲಿ ಅನೇಕ ಸಮಾಜಮುಖಿ ಕಾರ್ಯಗಳು ನಡೆದಿವೆ. ಕಷ್ಟದಲ್ಲಿರುವವರು ತಮ್ಮ ಸಮಸ್ಯೆಗಳನ್ನು ನಮ್ಮಲ್ಲಿ ಹೇಳಿಕೊಂಡಾಗ ತುರ್ತಾಗಿ ಅವರ ನೆರವಿಗೆ ಧಾವಿಸಲು ಸಂಘದ ಉಪ ಸಮಿತಿಗಳು ಶ್ರಮಿಸುತ್ತಿವೆ. ವೈದ್ಯಕೀಯ ನೆರವು, ಆರ್ಥಿಕ ಸಂಕಷ್ಟ, ಕರಿಮಣಿ ಕೊಡುಗೆ, ವಿದ್ಯಾಭ್ಯಾಸಕ್ಕೆ ನೆರವು ಹೀಗೆ ಹಲವಾರು ಬೇಡಿಕೆಗಳನ್ನು ಸಂಘ ಈಡೇರಿಸುತ್ತಿದೆ. ಸಂಕಷ್ಟದಲ್ಲಿರುವವರು ಬರುವಾಗ ಬೇಸರವಾದರೂ ಕೆಲವೊಂದು ನೆರವು ನೀಡಿದ ಸಂತಸ ನಮ್ಮಲ್ಲಿದೆ. ಇದು ನಮ್ಮ ಸಮಾಜದವರಿಗೆ ಬೆಂಗಳೂರು ಬಂಟರ ಸಂಘದ ಒಂದು ಕಿರುಸೇವೆ. ರಾಜ್ಯದ ಬೇರೆ ಬೇರೆ ಕಡೆಗಳಿಂದ ಹಲವಾರು ಬಂಟರ ಸಂಘಗಳು ವಿದ್ಯಾರ್ಥಿ ವೇತನ ನೀಡಿದಕ್ಕಾಗಿ ನಮ್ಮ ಸಂಘವನ್ನು ಮುಕ್ತ ಕಂಠದಿಂದ ಶ್ಲಾಘಿಸಿದ್ದಾರೆ.

ಯುವ ವಿಭಾಗದಿಂದ ಹೊಸ ವರ್ಷದ ಆಚರಣೆಯ ತಯಾರಿ, ಯಕ್ಷಗಾನ ಹಾಗೂ ರಂಗತರಬೇತಿ ಸಮಿತಿಯಿಂದ 24.12.2022ರಂದು ನಡೆಯಲಿರುವ ಕಾರ್ಯಕ್ರಮ, ಕ್ರೀಡಾ ಸಮಿತಿಯಿಂದ ವಿವಿಧ ಸ್ಪರ್ಧೆಗಳು, ಸಾಂಸ್ಕೃತಿಕ ವಿಭಾಗದಿಂದ ಸಾಂಸ್ಕೃತಿಕ ಸ್ಪರ್ಧೆಗಳು ಹೀಗೆ ಹಲವಾರು ಕಾರ್ಯಕ್ರಮಗಳಿಗಾಗಿ ಉಪಸಮಿತಿ ಸದಸ್ಯರೆಲ್ಲರೂ ಅವಿರತ ದುಡಿಯುತ್ತಿರುವುದು ಸಂತಸದ ವಿಷಯ. ಈ ಎಲ್ಲಾ ಕಾರ್ಯಕ್ರಮಗಳು ಉತ್ತಮ ರೀತಿಯಲ್ಲಿ ನಡೆಯಲೆಂದು ನಮ್ಮ ಹಾರೈಕೆ.

ವೈದ್ಯಕೀಯ ವಿಭಾಗ ಹಾಗೂ ಸಮಾಜ ಸೇವಾ ಸಮಿತಿಯಿಂದ 03.12.2022ರಂದು ನಡೆದ ಕಾರ್ಯಕ್ರಮ ಬಹಳ ಚೆನ್ನಾಗಿ ಮೂಡಿಬಂತು. ಸನ್ಮಾನ್ಯ ಸಂಸದರಾದ ಶ್ರೀ ತೇಜಸ್ವಿಸೂರ್ಯರವರು, ಮಾಜಿ ಸಚಿವರಾದ ಶ್ರೀ ಪ್ರಮೋದ್ ಮಧ್ವರಾಜ್‌ರವರು, ಮಾಜಿ ಕಾರ್ಪೋರೇಟರ್ ಶ್ರೀ ಉಮೇಶ್ ಶೆಟ್ಟಿಯವರು ಹಾಗೂ ಇ.ಎಸ್.ಐ.ಸಿ ವೈದ್ಯಕೀಯ ಕಾಲೇಜು ಹಾಗೂ ಆಸ್ಪತ್ರೆಯ ಡೀನ್‌ರಾದ ಡಾ। ನಂದಕಿಶೋರ್ ಆಳ್ವರವರು ಕಾರ್ಯಕ್ರಮಕ್ಕೆ ಅತಿಥಿಗಳಾಗಿ ಆಗಮಿಸಿದ್ದರು. ಇವರೆಲ್ಲರಿಗೂ ಸಂಘದ ಪರವಾಗಿ ಮನದಾಳದ ಧನ್ಯವಾದಗಳು. ಕಾರ್ಯಕ್ರಮದಲ್ಲಿ ಸಾರ್ವಜನಿಕರಿಗೆ ಅನೇಕ ಸೇವೆಗಳು ದೊರೆತವು. ವೈದ್ಯಕೀಯ ವಿಭಾಗ ಹಾಗೂ ಸಮಾಜ ಸೇವಾ ವಿಭಾಗದ ಎಲ್ಲಾ ಸದಸ್ಯರಿಗೆ ವಂದನೆಗಳು.

ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ I ಮತ್ತು IIರ ಸಂಕೀರ್ಣಗಳಲ್ಲಿ ಅನೇಕ ಅಭಿವೃದ್ಧಿ ಕೆಲಸಗಳು ನಡೆಯುತ್ತಿವೆ. ಅಗತ್ಯವಿರುವ ಅಧ್ಯಾಪಕರ ನೇಮಕಾತಿಯೂ ನಡೆಯುತ್ತಿದೆ. ತುರ್ತಾಗಿ ಅಗತ್ಯವಿರುವ ಪೀಠೋಪಕರಣಗಳೂ, ಲ್ಯಾಬ್‌ಗಳ ಸಾಮಾಗ್ರಿ ಇತ್ಯಾದಿ ಬೇಡಿಕೆಗಳನ್ನು ಪೂರೈಸಲಾಗಿದೆ. ಎರಡೂ ಶಾಲೆಗಳಲ್ಲಿನ ದೈನಂದಿನ ಬೆಳವಣಿಗೆಗಳನ್ನು ಬಹಳ ಸೂಕ್ಷ್ಮವಾಗಿ ಗಮನಿಸಲಾಗುತ್ತಿದ್ದು, ಸಣ್ಣಪುಟ್ಟ ಸಮಸ್ಯೆಗಳು ಬಂದಲ್ಲಿ ತಕ್ಷಣ ಸ್ಪಂದಿಸಲಾಗುತ್ತಿದೆ. ಮೊದಲ ಬಾರಿಗೆ ವಿದ್ಯಾನಿಕೇತನ IIರ ಆಟದ ಮೈದಾನದಲ್ಲಿ ಕ್ರೀಡಾ ಸಮಿತಿಯಿಂದ ನಡೆದ ಸ್ಪರ್ಧೆಗಳು ಅತ್ಯಂತ ಆಕರ್ಷಣೀಯವಾಗಿತ್ತು. ಸುಮಾರು 1000 ಜನ ಸದಸ್ಯರುಗಳು ಸ್ಪರ್ಧೆಗಳಲ್ಲಿ ಭಾಗವಹಿಸಿದ್ದರು. ಸಂಘದ ಆರ್.ಎನ್.ಎಸ್. ವಿದ್ಯಾನಿಕೇತನದ ದೈಹಿಕ ಶಿಕ್ಷಕರ ಸಹಕಾರವೂ ಬಹಳ ಉಪಯುಕ್ತವಾಗಿತ್ತು. ಅದ್ದೂರಿಯಾದ ಈ ಸಂಭ್ರಮದಲ್ಲಿ ವಿದ್ಯಾನಿಕೇತನ ವಿಜೃಂಭಣೆಯಿಂದ ಕಂಗೊಳಿಸಿತು.

ಇನ್ನೂ 2–3 ತಿಂಗಳೊಳಗಾಗಿ ತರಗತಿಗಳ ಅಂತಿಮ ಪರೀಕ್ಷೆಗಳು ಇರುವುದರಿಂದ ಎಲ್ಲಾ ಶಿಕ್ಷಕರಿಗೆ, ಪೋಷಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ತಕ್ಕ ಸಲಹೆಗಳನ್ನು ನೀಡಲಾಗಿದೆ. 100% ಫಲಿತಾಂಶದ ಬಗ್ಗೆ ಗಮನ ಹರಿಸಲಾಗಿದೆ.

**ಎಂ. ಮುರಲೀಧರ ಹೆಗ್ಡೆ**
ಅಧ್ಯಕ್ಷರು

# ಗೌರವ ಕಾರ್ಯದರ್ಶಿಗಳ ವರದಿ



ಮಾನ್ಯ ಸದಸ್ಯ ಬಾಂಧವರೇ,

ತಮಗೆಲ್ಲರಿಗೂ ಮಕರ ಸಂಕ್ರಾಂತಿ ಹಬ್ಬದ ಹಾರ್ದಿಕ ಶುಭಾಶಯಗಳು

ಕ್ರೀಡಾ ವಿಭಾಗವು ನವೆಂಬರ್ 13 ರಂದು ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನದಲ್ಲಿ ಆಯೋಜಿಸಿದ್ದ ಚೆಸ್, ಕೇರಂ, ಟೆನಿಕ್ವಾಯ್ಟ್ ಪಂದ್ಯಾವಳಿಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯ ಬಾಂಧವರು ತಮ್ಮ ಮಕ್ಕಳೊಂದಿಗೆ ಭಾಗವಹಿಸಿ ಪಂದ್ಯಾವಳಿಗಳನ್ನು ಯಶಸ್ವಿಗೊಳಿಸಿದರು. ಕ್ರೀಡಾಕೂಟವನ್ನು ಅಚ್ಚುಕಟ್ಟಾಗಿ ಆಯೋಜಿಸಿದ ಕ್ರೀಡಾ ಸಮಿತಿಯ ಚೇರ್‌ಮೆನ್ ಶ್ರೀ ಎಂ. ಕಿರಣ್ ಕುಮಾರ್ ಶೆಟ್ಟಿ, ಸಂಚಾಲಕ ಶ್ರೀ ನಿತ್ಯಾನಂದ ಹೆಗ್ಡೆ ಹಾಗೂ ತಂಡದ ಎಲ್ಲಾ ಸದಸ್ಯರಿಗೆ ಅಭಿನಂದನೆಗಳು.

ವೈದ್ಯಕೀಯ ವಿಭಾಗ ಮತ್ತು ವಿಮಾ ವಿಭಾಗ ಹಾಗೂ ಸಮಾಜ ಸೇವಾ ವಿಭಾಗದ ಜಂಟಿಯಾಗಿ ದಿನಾಂಕ 03.12.2022 ರಂದು ಆಯೋಜಿಸಿದ್ದ 'ಸೇವಾಚೇತನ-2022' ಕಾರ್ಯಕ್ರಮದಲ್ಲಿ ಆರೋಗ್ಯ ತಪಾಸಣಾ ಶಿಬಿರ, ರಕ್ತದಾನ ಶಿಬಿರ ಮೊದಲಾದ ಕಾರ್ಯಕ್ರಮದಲ್ಲಿ ಸದಸ್ಯ ಬಾಂಧವರು ಹಾಗೂ ಸುತ್ತಮುತ್ತಲಿನ ನಾಗರೀಕರು ಭಾಗವಹಿಸಿ ಕಾರ್ಯಕ್ರಮದ ಪ್ರಯೋಜನ ಪಡೆದರು. ಕಾರ್ಯಕ್ರಮ ಆಯೋಜಿಸಿದ ವೈದ್ಯಕೀಯ ವಿಭಾಗದ ಚೇರ್‌ಮೆನ್ ಶ್ರೀ ಕೆ. ನಿರಂಜನ್ ಶೆಟ್ಟಿ, ಸಂಚಾಲಕ ಶ್ರೀ ಚರಣ್‌ರಾಜ್ ಶೆಟ್ಟಿ, ಸಮಾಜ ಸೇವಾ ಸಮಿತಿ ಚೇರ್‌ಪರ್ಸನ್ ಶ್ರೀ ಸುದೀಪ್ ನಾಯಕ್, ಸಂಚಾಲಕ ಶ್ರೀ ಸಬನ್ ಶೆಟ್ಟಿ ಹಾಗೂ ಎರಡೂ ಸಮಿತಿಯ ಎಲ್ಲಾ ಸದಸ್ಯರಿಗೆ ಹೃತ್ಪೂರ್ವಕ ವಂದನೆಗಳು.

ಬಂಟರ ಸಂಘ ಆರ್.ಎನ್.ಎಸ್.ವಿದ್ಯಾನಿಕೇತನ ಸಂಯುಕ್ತ ಪದವಿಪೂರ್ವ ಕಾಲೇಜಿನ ಪ್ರತಿಭಾ ಸ್ಪರ್ಧೆ 'ಸ್ಫೂರ್ತಿ' ವಿಶೇಷ ಕಾರ್ಯಕ್ರಮಗಳೊಂದಿಗೆ ಜರುಗಿತು.

ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ಕ್ರೀಡಾ ಮತ್ತು ಸಾಂಸ್ಕೃತಿಕ ದಿನಾಚರಣೆಯ ಪ್ರಯುಕ್ತ ವಿವಿಧ ಕ್ರೀಡಾ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳು ಡಿಸೆಂಬರ್ ಮತ್ತು ಜನವರಿ ತಿಂಗಳನಲ್ಲಿ ನಡೆಯಲಿವೆ.

ರಂಗತರಬೇತಿ ಹಾಗೂ ಯಕ್ಷಗಾನ ಸಮಿತಿಯ ವತಿಯಿಂದ ದಿನಾಂಕ 24.12.2022 ರಂದು ಯಕ್ಷತರಂಗ ಎನ್ನುವ ವಿಶೇಷ ಕಾರ್ಯಕ್ರಮವನ್ನು ಆಯೋಜಿಸಿದ್ದು, ಸಂಘದ ಹವ್ಯಾಸಿ ಕಲಾವಿದರು, ಮಕ್ಕಳು ಹಾಗೂ ಅತಿಥಿಕಲಾವಿದರು ವಿವಿಧ ಯಕ್ಷಗಾನ ಪ್ರಸಂಗಗಳನ್ನು ಪ್ರಸ್ತುತ ಪಡಿಸಲಿದ್ದಾರೆ. ರಂಗತರಬೇತಿ ತರಗತಿಯ ವಿದ್ಯಾರ್ಥಿಗಳಿಂದ ರಂಗ ಪ್ರಯೋಗ ನಡೆಯಲಿದೆ.

ಸಂಘದ ಯುವ ವಿಭಾಗವು ಸಂಘದ ಆವರಣದಲ್ಲಿ ದಿನಾಂಕ 31.12.2022 ರಂದು ಹೊಸ ಕ್ಯಾಲೆಂಡರ್ ವರ್ಷ 2023ನ್ನು ಸ್ವಾಗತಿಸಲು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

ಕಾರ್ಯಕ್ರಮಗಳ ವಿವರಗಳನ್ನು ಈ ಸಂಚಿಕೆಯಲ್ಲಿ ಪ್ರಕಟಿಸಿದ್ದು, ತಾವೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ತಮ್ಮ ಕುಟುಂಬದೊಂದಿಗೆ ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕಾಗಿ ವಿನಂತಿ.

ಇಂತಿ ತಮ್ಮ ಪ್ರೀತಿಯ,

**ಬಿ. ಆನಂದರಾಮ ಶೆಟ್ಟಿ**
ಗೌರವ ಕಾರ್ಯದರ್ಶಿ

**ವಿ.ಸೂ: ಬಂಟರ ಸಂಘ ಆರ್.ಎನ್.ಎಸ್.ವಿದ್ಯಾನಿಕೇತನ –I ಮತ್ತು II ವಿದ್ಯಾಸಂಸ್ಥೆಗೆ (Montessorty to 1st Std) ತಮ್ಮ ಮಕ್ಕಳನ್ನು ಸೇರಿಸಲು ಇಚ್ಛಿಸುವ ಸದಸ್ಯ ಬಾಂಧವರು ಆನ್‌ಲೈನ್ ಮೂಲಕ (www.bsrnsv.com) ಅರ್ಜಿ ಸಲ್ಲಿಸಬಹುದಾಗಿದೆ. 1ನೇ ತರಗತಿಯ ನಂತರದ ತರಗತಿಗಳಲ್ಲಿ ನಿಗದಿತ ಸೀಟ್‌ಗಿಂತ ಹೆಚ್ಚಿನ ಸೀಟ್‌ಗಳು ಲಭ್ಯವಿಲ್ಲದೇ ಇರುವುದರಿಂದ ಲಿಖಿತ ಮೂಲಕ ಸಂಘದ ಕಛೇರಿಯಲ್ಲಿ ದಿನಾಂಕ 15.01.2023ರ ಒಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ. ಸದಸ್ಯರು ಕೊನೇ ಕ್ಷಣದವರೆಗೆ ಕಾಯದೇ ಆದಷ್ಟು ಶೀಘ್ರದಲ್ಲಿ ಶಾಲಾ ದಾಖಲಾತಿಗೆ ಅರ್ಜಿ ಸಲ್ಲಿಸಬೇಕಾಗಿ ವಿನಂತಿ.**


Creating life - long bonds
Since 19 Years
HOME FOR ALL
RERA Approved
JUST PAY ₹50K
TO BOOK YOUR DREAM HOME
BUDGET FLATS 18 LAKHS ONWARDS
COST INCLUDING GST
1 MATHA Emerald
2 MATHA Opal
3 MATHA Ruby
4 MATHA Diamond
5 MATHA Pearl
6 MATHA Crystal
7 MATHA Sapphire
SAI MATHA GARDEN
SURATHKAL, MANGALORE
NEAR TO BEACH & RAILWAY STATION
INTERNATIONAL AIRPORT ROAD, SURATHKAL
MATHA NANDINI RESIDENCY
PAKSHIKERE
MATHA GANGA RESIDENCY
PADMANOOR, KINNIGOLI
On Going Project in MUKKA & PADUBIDRI
Project Approved in all Nationalized Bank
MATHA Builders & Developers
Developers Pvt. Ltd.
SURATHKAL: Thara Towers, 2nd Floor, International Airport Road, Surathkal, Mangaluru - 575 014.
MUMBAI: Shop No. 8, Bldg. No. 1, New Venkateshwar Nagar, Cabin Road Bhayandar, (E), Thane Dist - 401 105.
9980711966
7022481666
mathadevelopers108@gmail.com
www.mathadevelopers.com
CREDAI
7259209966
7259269966(Mumbai)
Best Investment with Assured Rental Return

ADVT.

Shree Durgaparameshwari Educational Trust (Regd.)

College Code: AS1005

# J S Pre-University College

(Recgd. by Govt. of Karnataka)

# J S Degree College

(Affiliated to Bangalore University)

# 198, Balagangadhar Nagar, Kengunte, Near Dr. Ambedkar Engg.College Signal, Mallathahalli, Bengaluru - 560 056. Ph: 080-23218381 ; M: 8884666558
E-mail: info@jspuc.com | Website: www.jspuc.com




"We ensure academic excellence and discipline"

*"An institution with the determination and commitment to materialize the desired objectives through brilliant academic brains".*

## COURSES OFFERED

**PUC - SCIENCE:** P C M B, P C M Cs., P C M E
**PUC - COMMERCE:** B A S Cs., E B A Cs., E B A S
**Languages:** English, Kannada, Hindi, Sanskrit

**Facilities:**
CET / NEET / JEE / KVPY / NATA / CA - Foundation, IAS Integrated

**Degree Courses:** B.Com, BBA, BCA




## Our First Batch of II PUC Annual Exam Results: 2022 State Rank Holders



**Madhushree S. Shetty**
PCMB: Total - 589 (98.16%)
Phy: 100 ; Maths: 100 ; Chem: 99
Bio: 99 ; Kan: 99 ; Eng: 92
**State 8th Rank**



**Moulya R. Gowda**
PCMB: Total - 587 - (97.8%)
Phy: 100 ; Maths: 100 ; Chem: 100
Bio: 100 ; Kan: 94 ; Eng: 93
**State 10th Rank**



**Pooja J. Yadav**
BASC: Total - 580 - (96.66%)
B: 99 ; S: 98 ; A: 97 ; E: 96
H: 96 ; C: 94
**State 15th Rank**



**Sujal Kumar R.**
PCMB: Total - 576 - (96%)
Phy: 95 ; Maths: 100 ; Chem: 94
Bio: 96 ; Hin: 99 ; Eng: 92
**State 20th Rank**

**Enrol Now**
E-mail: info@jspuc.com | Website: www.jspuc.com



## Prof. Dr. Jayarama Shetty S.

M.A., M.Ed., M.Sc., M.B.A., Ph.D., P.G.D.P.M.I.R., F.M.S.P.I., D.B.M.
Founder / Director

An epitome in the field of education. A renowned educationist, philanthropist and psychologist who has been a catalyst in many success stories. Dr. Shetty has been mentoring, guiding, counselling and nurturing students for over a period of four decades, both in Mangalore and Bangalore. He has been persistent in seeking remarkable results with ranks and distinction by adopting innovative pedagogy.

**For more information on Admission Contact:**
**Ph: 080-23218381**
**M: 8884666558**

ADVT.

ಬಂಟರ ಸಂಘ ಬೆಂಗಳೂರು
BUNTS' SANGHA BANGALORE

# ಕ್ರೀಡಾ ಸಮಿತಿ

**ಆತ್ಮೀಯ ಸದಸ್ಯರೇ,**

2022–23 ನೇ ಸಾಲಿಗೆ ಕ್ರೀಡಾ ಸಾಧನಾ ಪ್ರಶಸ್ತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುತ್ತಿದ್ದು, ಅರ್ಜಿ ಸಲ್ಲಿಸಬಯಸುವ ಅಭ್ಯರ್ಥಿಗಳು ಈ ಕೆಳಗಿನ ಅರ್ಹತೆಗಳನ್ನು ಹೊಂದಿದ್ದು, ದಾಖಲೆಗಳನ್ನು ಲಗತ್ತಿಸತಕ್ಕದ್ದು.

- ತಮ್ಮ ಸಾಧನೆಗಳು ಕಳೆದ ಸಾಲಿನಲ್ಲಿ ಪಡೆದ ಪ್ರಶಸ್ತಿ ಸ್ವೀಕರಿಸಿರುವುದಕ್ಕಿಂತ ಹೆಚ್ಚಿನದಾಗಿರಬೇಕು.
- ದೇಶ ಅಥವಾ ರಾಜ್ಯವನ್ನು ಪ್ರತಿನಿಧಿಸಿ ಪ್ರಶಸ್ತಿ ಪಡೆದಿರತಕ್ಕದ್ದು. ಇಲ್ಲವೇ ಅಖಿಲ ಭಾರತ ಅಂತರ–ವಿಶ್ವವಿದ್ಯಾಲಯ ಕ್ರೀಡಾಕೂಟಗಳಲ್ಲಿನ ಪ್ರಶಸ್ತಿ / ಪದಕ ವಿಜೇತರಾಗಿರಬೇಕು.
- ಭಾಗವಹಿಸಿರುವ ಎಲ್ಲಾ ಸ್ಪರ್ಧೆಗಳು ಭಾರತೀಯ ಒಲಿಂಪಿಕ್ಸ್ ಅಸೋಸಿಯೇಶನ್‌ನ ಪ್ರಾಯೋಜಕತ್ವದಲ್ಲಿ ನಡೆದಿರಬೇಕು ಅಥವಾ ಅದರಿಂದ ಗುರುತಿಸಲ್ಪಟ್ಟ ಅಂಗ ಸಂಸ್ಥೆಗಳ ವತಿಯಿಂದ ನಡೆಸಿರುವ ಕ್ರೀಡಾಕೂಟಗಳಾಗಿರಬೇಕು.
- ಅರ್ಜಿಯೊಂದಿಗೆ ತಮ್ಮ ಇತ್ತೀಚಿನ ಸಾಧನೆಯ ದಾಖಲೆಗಳ ಎಲ್ಲಾ ಯಥಾ ಪ್ರತಿ, ತಮ್ಮ ವೈಯಕ್ತಿಕ ಪರಿಚಯ, 1 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಒದಗಿಸಬೇಕು.

ಮೇಲ್ಕಂಡ ಅರ್ಹತೆಯುಳ್ಳ ಅರ್ಜಿಗಳನ್ನು ಗೌರವ ಕಾರ್ಯದರ್ಶಿ ಇವರಿಗೆ ನಮೂದಿಸಿ ಸಂಘದ ವಿಳಾಸಕ್ಕೆ ದಿನಾಂಕ 31.12.2022ರ ಒಳಗಾಗಿ ತಲುಪುವಂತೆ ಸಲ್ಲಿಸಲು ಕೋರಲಾಗಿದೆ. ಆಯ್ಕೆಯಾದ ಅಭ್ಯರ್ಥಿಗಳಿಗೆ ದಿನಾಂಕ 26.01.2023 ರಂದು ನಡೆಯಲಿರುವ ಸಂಘದ ಸ್ಥಾಪಕರ ದಿನಾಚರಣೆಯ ಸಮಾರಂಭದಲ್ಲಿ ನಗದು ಹಾಗೂ ಪ್ರಶಸ್ತಿ ಫಲಕ ನೀಡಿ ಗೌರವಿಸಲಾಗುವುದು.

ನಿಗದಿತ ದಿನಾಂಕದ ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

**ಆನಂದರಾಮ ಶೆಟ್ಟಿ ಬಿ.**
ಗೌರವ ಕಾರ್ಯದರ್ಶಿ

**ಎಂ. ಮುರಲೀಧರ ಹೆಗ್ಡೆ**
ಅಧ್ಯಕ್ಷರು

**ನಿತ್ಯರಂಜನ್ ಶೆಟ್ಟಿ**
ಸಂಚಾಲಕರು, ಕ್ರೀಡಾ ಸಮಿತಿ

**ಕಿರಣ್‌ಕುಮಾರ್ ಶೆಟ್ಟಿ**
ಚೇರ್‌ಪರ್ಸನ್, ಕ್ರೀಡಾ ಸಮಿತಿ

**ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು, ಕ್ರೀಡಾ ಸಮಿತಿ ಸದಸ್ಯರು**

## ಅಭಿನಂದನೆಗಳು



ಕಿತ್ತೂರು ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ 2021–22ನೇ ಸಾಲಿನ ಎಂ.ಪಿ.ಇಡಿ ಅಂತಿಮ ಪರೀಕ್ಷೆಯಲ್ಲಿ ಸುಶ್ಮಿತಾ ಶೆಟ್ಟಿ ಪ್ರಥಮ ರ್‍ಯಾಂಕ್ ಗಳಿಸಿರುತ್ತಾರೆ. ಕ್ರೀಡೆಯಲ್ಲಿ ಹೆಚ್ಚಿನ ಆಸಕ್ತಿ ಹೊಂದಿರುವ ಇವರು ತ್ರೋಬಾಲ್ ಹಾಗೂ ಡ್ಯೂಬಾಲ್‌ನಲ್ಲಿ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಪಂದ್ಯಾವಳಿಗಳಲ್ಲಿ ಭಾಗವಹಿಸಿರುವ ಇವರು ಕಳೆದ ಮೇ ತಿಂಗಳಿನಲ್ಲಿ ಜರುಗಿದ ಪೆಂಟಾಂಗ್ಯುಲರ್ ಡ್ಯೂಬಾಲ್ ಚಾಂಪಿಯನ್‌ಶಿಪ್‌ನ ರೆಫರಿಯಾಗಿ ಆಯ್ಕೆಗೊಳ್ಳುವ ಮೂಲಕ ಡ್ಯೂಬಾಲ್‌ನ ಏಕೈಕ ಅಂತಾರಾಷ್ಟ್ರೀಯ ಮಹಿಳಾ ರೆಫರಿ ಎನ್ನುವ ಹೆಗ್ಗಳಿಕೆಗೆ ಪಾತ್ರರಾಗಿರುತ್ತಾರೆ. ಈಕೆ ನಮ್ಮ ಸಂಘದ ಸದಸ್ಯರಾದ ಶ್ರೀಮತಿ ಹೇಮಲತಾ ಶೆಟ್ಟಿ ತೆಕ್ಕಟ್ಟೆ ಮತ್ತು ಬ್ರಹ್ಮಾವರ ಶ್ರೀ ಸುಧಾಕರ ಶೆಟ್ಟಿಯವರ ಸುಪುತ್ರಿ. ಇವರಿಗೆ ಬಂಟರ ಸಂಘದ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳು.

# ಬಂಟರ ಸಂಘ ಬೆಂಗಳೂರು ಸಾಂಸ್ಕೃತಿಕ ವಿಭಾಗ

## ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಸಾಂಸ್ಕೃತಿಕ ಸ್ಪರ್ಧೆ 2022–23

**ಸ್ಥಳ : ಬಂಟರ ಸಂಘದ ಆವರಣ**
**ದಿನಾಂಕ : 14.01.2023, ಶನಿವಾರ, ಮಧ್ಯಾಹ್ನ 02.30 ರಿಂದ**
**ಹೆಸರು ನೋಂದಾಯಿಸಲು ಕೊನೆಯ ದಿನಾಂಕ : 12.01.2023**

### 1. ರಂಗೋಲಿ (ಪುಷ್ಪ ರಂಗೋಲಿ) (Pookalam)

**ಪ್ರವೇಶ ಶುಲ್ಕ** : ರೂ.100/– ಪ್ರತಿ ವ್ಯಕ್ತಿಗೆ
**ಕಾಲಾವಕಾಶ** : 60 ನಿಮಿಷ
**ವಯೋಮಿತಿ** : ಎ) 16 ವರ್ಷದ ಒಳಗೆ
ಬಿ) 16 ವರ್ಷ ಮೇಲ್ಪಟ್ಟು

* ಸ್ಪರ್ಧಿಗಳ ಸಂಖ್ಯೆ 6 ಕ್ಕಿಂತ ಕಡಿಮೆ ಇದ್ದ ಪಕ್ಷದಲ್ಲಿ ವಯೋಮಿತಿಯನ್ನು ಮುಕ್ತ ಎಂದು ಪರಿಗಣಿಸಲಾಗುವುದು

### 2. ಚಿತ್ರ ಬಿಡಿಸುವುದು (DRAWING)

**ಪ್ರವೇಶ ಶುಲ್ಕ** : ರೂ.100/– ಪ್ರತಿ ವ್ಯಕ್ತಿಗೆ
**ಕಾಲಾವಕಾಶ** : 45 ನಿಮಿಷ
**ವಯೋಮಿತಿ** : ಎ) 6 ವರ್ಷದ ಒಳಗೆ
ಬಿ) 6 ವರ್ಷ ಮೇಲ್ಪಟ್ಟು 10 ವರ್ಷದವರೆಗೆ
ಸಿ) 10 ವರ್ಷ ಮೇಲ್ಪಟ್ಟು 16 ವರ್ಷದವರೆಗೆ
ಡಿ) 16 ವರ್ಷ ಮೇಲ್ಪಟ್ಟು

**ಸ್ಥಳ : ಬಂಟರ ಸಂಘದ ಆವರಣ**
**ದಿನಾಂಕ : 15.01.2023, ಭಾನುವಾರ, ಬೆಳಿಗ್ಗೆ : 9.30 ರಿಂದ**
**ಹೆಸರು ನೋಂದಾಯಿಸಲು ಕೊನೆಯ ದಿನಾಂಕ : 12.01.2023**

### 1. ನೃತ್ಯ (Dance)

1. ಶಾಸ್ತ್ರೀಯ ನೃತ್ಯ (Indian Classical Solo)
2. ಜಾನಪದ ನೃತ್ಯ (Folk Solo)
3. ಫ್ರೀ ಸ್ಟೈಲ್ (Free - Style - Solo)
4. ಸಮೂಹ ನೃತ್ಯ (Group Dance - 3 Members & Above - Open)

ಶಾಸ್ತ್ರೀಯ, ಜಾನಪದ, ಫ್ರೀ ಸ್ಟೈಲ್ ನೃತ್ಯಗಳಲ್ಲಿ ಓರ್ವ ಸ್ಪರ್ಧಿಯು ಯಾವುದೇ ಗರಿಷ್ಠ ಎರಡು ವಿಭಾಗಗಳಲ್ಲಿ ಮಾತ್ರ ಭಾಗವಹಿಸತಕ್ಕದ್ದು.

**ಪ್ರವೇಶ ಶುಲ್ಕ :** ಎ) ಪ್ರತಿ ವ್ಯಕ್ತಿಗೆ – ರೂ. 100/–
ಬಿ) ಪ್ರತಿ ತಂಡಕ್ಕೆ / ಜೋಡಿಗೆ ರೂ. 200/–

| **ವಯೋಮಿತಿ** | **ಕಾಲಾವಕಾಶ** |
|---|---|
| ಎ) 6 ವರ್ಷ ಮೇಲ್ಪಟ್ಟು 10 ವರ್ಷದವರೆಗೆ | 2 + 1 ನಿಮಿಷ |
| ಬಿ) 10 ವರ್ಷ ಮೇಲ್ಪಟ್ಟು 16 ವರ್ಷದವರೆಗೆ | 2 + 1 ನಿಮಿಷ |
| ಸಿ) 16 ವರ್ಷ ಮೇಲ್ಪಟ್ಟು 30 ವರ್ಷದವರೆಗೆ | 2 + 1 ನಿಮಿಷ |
| ಡಿ) 30 ವರ್ಷದ ಮೇಲ್ಪಟ್ಟು | 2 + 1 ನಿಮಿಷ |
| ಇ) ಸಮೂಹ ನೃತ್ಯ (ಮುಕ್ತ) | 2 + 1 ನಿಮಿಷ |

**(ಶಾಸ್ತ್ರೀಯ ನೃತ್ಯಕ್ಕೆ ಕಾಲಾವಕಾಶ – 3 + 1 ನಿಮಿಷ)**

| | |
|---|---|
| ಅನುರಾಧ ಎ. ಶೆಟ್ಟಿ - 99807 69129 | ಅನುಸೂಯ ಶೆಟ್ಟಿ - 98444 30362 |
| ಆತ್ಮರಾಮ ಆಳ್ವ - 90082 87507 | ಕಾರ್ತಿಕ್ ಶೆಟ್ಟಿ - 95356 16575 |
| ಪ್ರಸಾದ್ ಶೆಟ್ಟಿ - 96630 05588 | ಸಚಿನ್ ಶೆಟ್ಟಿ - 77602 31093 |
| ಸಬಿತ ಎ. ಮಲ್ಲಿ - 92431 26335 | ಸಂದೀಪ್ ಹೆಗ್ಡೆ - 99459 35494 |
| ಸಂತೋಷ್ ಶೆಟ್ಟಿ - 90354 29265 | ಸಂತೋಷ್ ಶೆಟ್ಟಿ - 98452 13876 |
| ಶೋಭಾ ಎಸ್. ಶೆಟ್ಟಿ - 93432 35050 | ಶರತ್ ಶೆಟ್ಟಿ - 97405 42476 |
| ಶಶಿಧರ್ ಶೆಟ್ಟಿ - 63638 65719 | ಸುಖಲತಾ ಶೆಟ್ಟಿ - 92430 80987 |
| ಸುವೀಕ್ಷಾ ಶೆಟ್ಟಿ - 95388 50360 | |

- ಎಲ್ಲಾ ಸ್ಪರ್ಧೆಗಳು ನಿಗದಿಪಡಿಸಿದ ಸಮಯದಲ್ಲೇ ನಡೆಯುವುದು. ಸ್ಪರ್ಧಿಗಳು ನಿಗದಿಪಡಿಸಿದ ಸಮಯಕ್ಕಿಂತ 30 ನಿಮಿಷಗಳ ಮುಂಚಿತವಾಗಿ ತಮ್ಮ ಹಾಜರಾತಿಯನ್ನು ಖಚಿತಪಡಿಸಿಕೊಳ್ಳತಕ್ಕದ್ದು.
- **ನಿಗದಿತ (ಕೊನೆಯ) ದಿನಾಂಕದ ನಂತರ ಬಂದ ನೋಂದಣಿಗಳನ್ನು ಸ್ವೀಕರಿಸಲಾಗುವುದಿಲ್ಲ.** ನೋಂದಣಿಯನ್ನು ಮೊದಲೇ ಮಾಡಿಸಿದ್ದಲ್ಲಿ ಮಾತ್ರ ಪ್ರವೇಶ ಶುಲ್ಕವನ್ನು ಸ್ಥಳದಲ್ಲಿ ಸ್ವೀಕರಿಸಲಾಗುವುದು. ಸ್ಪರ್ಧೆಯ ವೇಳೆಯಲ್ಲಿ ಕಡ್ಡಾಯವಾಗಿ ರಶೀದಿಯನ್ನು ತೋರಿಸತಕ್ಕದ್ದು. ಸ್ಪರ್ಧೆ ತಡರಾತ್ರಿಯವರೆಗೆ ನಡೆದು ಸ್ಪರ್ಧಿಗಳಿಗೆ ಹಾಗೂ ತೀರ್ಪುಗಾರರಿಗೆ ಅನಾನುಕೂಲವಾಗದಂತೆ ಮಾಡಲು ನಿಗದಿತ ದಿನಾಂಕದ ಮೊದಲು ನೋಂದಣಿ ಕಡ್ಡಾಯ.
- ಯಾವುದೇ ಸ್ಪರ್ಧೆಯಲ್ಲಿ ಮೂರು ಸ್ಪರ್ಧಿಗಳು ಮತ್ತು ಅದಕ್ಕಿಂತ ಕಮ್ಮಿ ಇದ್ದರೆ ಒಂದು ಬಹುಮಾನ, ಮೂರರಿಂದ ಆರು ಸ್ಪರ್ಧಿಗಳು ಭಾಗವಹಿಸಿದ್ದಲ್ಲಿ ಕೇವಲ ಎರಡು ಬಹುಮಾನಗಳು ಮತ್ತು ಆರಕ್ಕಿಂತ ಹೆಚ್ಚು ಸ್ಪರ್ಧಿಗಳು ಇದ್ದಲ್ಲಿ ಮೂರು ಬಹುಮಾನ ನೀಡಲಾಗುವುದು.
- ಸ್ಪರ್ಧಿಗಳು ತಮ್ಮ ಜನನ ದಿನಾಂಕದ ದೃಢೀಕರಣವನ್ನು ಹಾಜರುಪಡಿಸಬೇಕು.

**ಈ ಎಲ್ಲಾ ಸ್ಪರ್ಧೆಗಳಿಗೆ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಸ್ಪರ್ಧಾಳುಗಳನ್ನು ಪ್ರೋತ್ಸಾಹಿಸಬೇಕಾಗಿ ವಿನಂತಿ**

**ಆನಂದರಾಮ ಶೆಟ್ಟಿ ಬಿ.**
ಗೌರವ ಕಾರ್ಯದರ್ಶಿ

**ಎಂ. ಮುರಲೀಧರ ಹೆಗ್ಡೆ**
ಅಧ್ಯಕ್ಷರು

**ಮಹೇಶ್ ಶೆಟ್ಟಿ, ಬೈಲೂರು**
ಸಂಚಾಲಕರು, ಸಾಂಸ್ಕೃತಿಕ ಸಮಿತಿ
**ಮೊ : 99809 51966**

**ಜಯಶ್ರೀ ಸಿ. ರೈ**
ಚೇರ್‌ಮೆನ್, ಸಾಂಸ್ಕೃತಿಕ ಸಮಿತಿ
**ಮೊ : 99459 99255**

# ರಸ್ತೆ ಅಪಘಾತಗಳ ತಡೆ ಹೇಗೆ?



ಎ. ಬಿ ಶೆಟ್ಟಿ

ಕಳೆದ ಐದು ವರ್ಷಗಳಲ್ಲಿ ಭಾರತದಲ್ಲಿ 23,63,031 ರಸ್ತೆ ಅಪಘಾತಗಳು ಸಂಭವಿಸಿದ್ದು ಸುಮಾರು 7,47,361 ಸಾವುಗಳು ಸಂಭವಿಸಿವೆ. 2021 ರಲ್ಲಿ ದೇಶದಲ್ಲಿ 4,22,669 ಅಪಘಾತಗಳು ಸಂಭವಿಸಿದ್ದು 1.55 ಲಕ್ಷ ಜನರು ಅಸುನೀಗಿದ್ದಾರೆ. ಕರ್ನಾಟಕದಲ್ಲಿ 2021 ರಲ್ಲಿ 34,647 ಅಪಘಾತಗಳು ಆಗಿದ್ದು 40,754 ಜನರು ಗಾಯಗೊಂಡಿದ್ದು 10,038 ಜನರು ಸಾವಿಗೀಡಾಗಿದ್ದಾರೆ. ರಸ್ತೆ ಅಪಘಾತಗಳ ನಿಟ್ಟಿನಲ್ಲಿ ತಮಿಳುನಾಡು ದೇಶದಲ್ಲಿ ಒಂದನೇ ಸ್ಥಾನದಲ್ಲಿದ್ದು, ಕರ್ನಾಟಕವು ಮೂರನೇ ಸ್ಥಾನದಲ್ಲಿ ಇದೆ. 2020ರಲ್ಲಿ ತಮಿಳುನಾಡಿನಲ್ಲಿ 45000ಕ್ಕೆ ಮೀರಿ ರಸ್ತೆ ಅಪಘಾತಗಳು ಸಂಭವಿಸಿವೆಯಂತೆ. 2021–22 ರಲ್ಲಿ ರಾಜ್ಯದಲ್ಲಿ ಬೆಳಗಾವಿಯು (816) ಅಪಘಾತಗಳಿಂದ ಮೊದಲನೇ ಸ್ಥಾನದಲ್ಲಿ ಇದ್ದರೆ, ನಂತರದ ಸ್ಥಾನದಲ್ಲಿ ಬೆಂಗಳೂರು (633) ಮತ್ತು ತುಮಕೂರು (596) ಇವೆ. ಜಾಗತಿಕವಾಗಿ ಅಮೇರಿಕಾ ಮೊದಲನೆ ಸ್ಥಾನದಲ್ಲಿ ಇದೆ. ನ್ಯಾಷನಲ್ ಕ್ರೈಮ್ ರಿಪೋರ್ಟಿಂಗ್ (NCRB - National Crime Reporting Bureo) ಈ ಮಾಹಿತಿಯು ದಿಗ್ಭ್ರಮೆ ಮೂಡಿಸುತ್ತದೆ.

ಈ ಅಪಘಾತಗಳ ಹಿಂದಿನ ಕಾರಣಗಳನ್ನು ನೋಡಿದಾಗ, ಪ್ರಕಟವಾಗಿರುವ ಕೆಲವು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ರಿಸರ್ಚ್ ಪೇಪರ್‌ಗಳನ್ನು ಅವಲೋಕಿಸಿದಾಗ ರಸ್ತೆಗಳ ಗುಣಮಟ್ಟ, ರಸ್ತೆ ಹೊಂಡಗಳು, ತೀವ್ರವಾದ (sharp) ತಿರುವುಗಳಿಂದ human error ಮತ್ತು common behaviour of drivers ಮೇಲ್ಮೆಯಲ್ಲಿ ಕಾಣುತ್ತದೆ.

1. ಲಭ್ಯ ಇರುವ ಮಾಹಿತಿಗಳ ಪ್ರಕಾರ ಅತಿ ವೇಗವೇ (over speeding) ರಸ್ತೆ ಅಪಘಾತಗಳ ಹಿಂದಿನ ಮುಖ್ಯ ಕಾರಣ. ಸುಮಾರು ಶೇ. 60 ರಷ್ಟು ಅಪಘಾತಗಳು ಅತಿ ವೇಗದಿಂದ ಆಗುತ್ತವೆ. ಅಪಘಾತದಲ್ಲಿನ ಸುಮಾರು 50–55% ಸಾವುಗಳು ಅತಿವೇಗದಿಂದಲೇ ಆಗುತ್ತವೆ.

2. ಚಾಲಕರ ಗಮನ ಸೆಳೆಯುವ (distraction) ರಸ್ತೆ ಪಕ್ಕದಲ್ಲಿ ಅಂಟಿಸಿರುವ ಜಾಹೀರಾತು, ಸಿನೆಮಾ ಹೋರ್ಡಿಂಗ್ಸ್, ಬಂಟಿಂಗ್ಸ್, ಪೋಸ್ಟರ್ಸ್ ಮತ್ತು ಫಲಕಗಳು, ಬೀಡಿ–ಸಿಗರೇಟ್ ಸೇದುವುದು, ವಾಹನ ಓಡಿಸುವಾಗಲೇ ಫೋನಿನಲ್ಲಿ ಮಾತನಾಡವುದು ಅಪಘಾತಗಳಲ್ಲಿ ಮುಖ್ಯ ಪಾತ್ರವಾಗಿರುತ್ತವೆ ಎನ್ನುವುದರಲ್ಲಿ ಸತ್ಯವಿಲ್ಲದಿಲ್ಲ.

3. ಪ್ರತಿಯೊಬ್ಬರೂ ಅವಸರದಲ್ಲಿ ಇರುತ್ತಿದ್ದು, ಕೆಲವರಿಗೆ ಟ್ರಾಫಿಕ್ ಸಿಗ್ನಲ್ಲಿಗಾಗಿ ಕಾಯುವ ವ್ಯವಧಾನ ಇರುವುದಿಲ್ಲ. ಸಿಗ್ನಲ್ ಜಂಪ್ ಮಾಡಿ ಮುನ್ನುಗ್ಗುವುದರಲ್ಲಿ ಕೆಲವರು ನಿಸ್ಸೀಮರಾಗಿದ್ದು, ಅದರಿಂದಾಗುವ ಅಪಾಯದ ಬಗೆಗೆ ಎಂದೂ ಯೋಚಿಸುವುದಿಲ್ಲ. ಕಾನೂನು ಪರಿಪಾಲನೆಗಿಂತ ಅದರ ಉಲ್ಲಂಘನೆಯಲ್ಲಿ ಹೆಚ್ಚಿನ ಧನ್ಯತೆಯನ್ನು ಅವರು ಕಾಣುತ್ತಾರೆ.

4. ಚಾಲಕರ ಮತ್ತು ಸಹಪ್ರಯಾಣಿಕರ ಸುರಕ್ಷಿತತೆಗಾಗಿ ಇರುವ ಹೆಲ್ಮೆಟ್ ಬಳಸಲು ಒಂದು ರೀತಿಯ ಅಲರ್ಜಿ ಮತ್ತು ತಾತ್ಸಾರ. ಕೆಲವರು ತಮ್ಮ ತಲೆ ಕೂದಲು ಅಸ್ತವ್ಯಸ್ತವಾಗುತ್ತದೆ ಎಂದು ಹೆಲ್ಮೆಟ್ ಧರಿಸಲು ಹಿಂದೇಟು ಹಾಕುತ್ತಾರೆ. ಅವರಿಗೆ ಜೀವಕ್ಕಿಂತ ಅದನ್ನು ಅಡಚಣೆ ಮತ್ತು ಅನಾನುಕೂಲ ಎಂದು ಭಾವಿಸುತ್ತಾರೆ. ಸೀಟ್‌ಬೆಲ್ಟ್ ಧರಿಸುವ ಬಗೆಗೂ ಇದೇ ಮನೋಭಾವ ಎದ್ದು ಕಾಣುತ್ತದೆ. ಸೈರಸ್ ಮಿಸ್ತ್ರಿ ವಾಹನ ಅಪಘಾತದಲ್ಲಿ ಸತ್ತಿದ್ದು, ಸದಾ ನೆನಪಿಗೆ ಬರುತ್ತದೆ. ಅವರು ಸೀಟ್ ಬೆಲ್ಟ್ ಧರಿಸಿದ್ದರೆ?....

5. ರಸ್ತೆಗಳಲ್ಲಿ ಪಥ (ಲೇನ್) ಬದಲಾವಣೆ ಬಗೆಗೆ ನಿರ್ದಿಷ್ಟ ಶಿಸ್ತು ಇರುತ್ತಿದ್ದು, ಅದನ್ನು ಗಂಭೀರವಾಗಿ ಪಾಲಿಸ ಬೇಕಾಗುತ್ತದೆ. ನಾನೇ ಮೊದಲು ಮತ್ತು ನಾನೇ ಹುಷಾರೆಂಬ ಧಾವಂತದಲ್ಲಿ ಲೇನ್ ಶಿಸ್ತನ್ನು ಪಾಲಿಸದೇ ಅಡ್ಡಾದಿಡ್ಡಿ ಡ್ರೈವ್ ಮಾಡುವುದು ನಮ್ಮ ರಸ್ತೆಗಳಲ್ಲಿ ತೀರಾ ಮಾಮೂಲು.

6. ಹಾಗೆಯೇ ಮುಂದಿರುವ ವಾಹನಗಳನ್ನು ನಿಷ್ಕಾಳಜಿಯಿಂದ ಓವರ್ ಟೇಕ್ ಮಾಡುವುದು ಇನ್ನೊಂದು ದುರಭ್ಯಾಸ. ಓವರ್ ಟೇಕ್ ಮಾಡುವಾಗ ಪಾಲಿಸಬೇಕಾದ ಕನಿಷ್ಟ ಎಚ್ಚರಿಕೆಯನ್ನು ಗಮನಿಸದಿರುವುದನ್ನು ಕಾಣಬಹುದು.

7. ಕೆಲವು ಟೂರಿಸ್ಟ್ ಕಾರ್‌ಗಳು ಮತ್ತು ಟ್ರಕ್‌ಗಳು ಅಪಘಾತವಾಗುವುದರ ಹಿಂದೆ ಅವುಗಳ ಚಾಲಕರು ನಿದ್ರೆಗೆಟ್ಟು, ಸಮಯಕ್ಕೆ ಸರಿಯಾಗಿ ಊಟ ತಿಂಡಿ ಇರದೇ ಸುದೀರ್ಘ ಅವಧಿಯ ಡ್ರೈವಿಂಗ್ ಮಾಡುವುದು. ಕೆಲವರು ತುಸು ಹೆಚ್ಚಿನ ಸಂಪಾದನೆಗಾಗಿ ತಮ್ಮ ಆರೋಗ್ಯ ಮತ್ತು ವಿಶ್ರಾಂತಿಯನ್ನು ಮರೆತು ಡ್ರೈವಿಂಗ್ ಮಾಡುವುದು.

8. ಕೆಲವು ಪ್ರಸಂಗಗಳಲ್ಲಿ ವಾಹನಗಳನ್ನು ಓವರ್ ಲೋಡ್ ಮಾಡಿ ಓಡಿಸುವುದು.

9. ರಸ್ತೆಗಳಲ್ಲಿ ಕ್ರಮಬದ್ಧ ವಾಹನ ಚಾಲನೆಗಾಗಿ ಸರಿಯಾದ ಸೂಚನಾ ಫಲಕಗಳನ್ನು ಹಾಕದಿರುವುದು, ಅಥವಾ ಅಂಥಹ ಸೂಚನಾ ಫಲಕಗಳು ಸಂಬಂಧವಿರದ ಭಾಷೆಯಲ್ಲಿ ಇರುವುದು.

10. ವಾಹನವನ್ನು ರಸ್ತೆಗಿಳಿಸುವಾಗ ವಾಹನ ಎಲ್ಲಾ ದೃಷ್ಟಿಯಲ್ಲಿ ಸುಭದ್ರವಾಗಿದೆ ಮತ್ತು ಚಾಲನೆಗೆ ಅರ್ಹವಾಗಿದೆ ಎಂದು ದೃಢೀಕರಿಸಿಕೊಳ್ಳದಿರುವುದು.

11. ವಾಹನಗಳ ಮಧ್ಯ ಕನಿಷ್ಟ ಅಂತರವನ್ನು ಕಾಯ್ದು ಕೊಳ್ಳದಿರುವುದು.

12. ಚಾಲನಾ ಪತ್ರ ಕೊಡುವಾಗ ನಿಯಮಾವಳಿಗಳನ್ನು ಕಟ್ಟುನಿಟ್ಟಾಗಿ ಪಾಲಿಸದಿರುವುದು ಮತ್ತು ಪ್ರಥಮ ಚಿಕಿತ್ಸೆ ಬಗೆಗೆ ತಿಳುವಳಿಕೆ ನೀಡದಿರುವುದು.

13. ಮಧ್ಯಪಾನ ಮಾಡಿ, ಮಾದಕ ಪದಾರ್ಥಗಳನ್ನು ಸೇವನೆ ಮಾಡಿ ವಾಹನಗಳನ್ನು ಡ್ರೈವ್ ಮಾಡುವುದು ವಾಹನ ಅಪಘಾತಗಳ ಹಿಂದಿನ ಮುಖ್ಯ ಕಾರಣಗಳಲ್ಲಿ ಒಂದು ಎನ್ನುವ ಭಾವನೆ ಇತ್ತೀಚೆಗೆ ಜೋರಾಗಿ ಕೇಳುತ್ತಿದ್ದು, ಇದರಲ್ಲಿ ಅರ್ಥವಿಲ್ಲದಿಲ್ಲ. ಮಧ್ಯಪಾನ ಮಾಡಿ ವಾಹನ ಚಲಾಯಿಸಬೇಡಿ ಎನ್ನುವ ಕಳಕಳಿಯ ಮನವಿ ಯಾರಿಗೂ ಕೇಳುತ್ತಿಲ್ಲ. ಬಹುತೇಕ ಅಪಘಾತಗಳಲ್ಲಿ ಚಾಲಕ ಮಧ್ಯ ಸೇವಿಸಿರುವುದು ಎದ್ದು ಕಾಣುತ್ತದೆ.

14. ಯುವಕರ ಮತ್ತು ವಿದ್ಯಾರ್ಥಿಗಳ ಮೋಜು – ಮಸ್ತಿ ಡ್ರೈವಿಂಗ್ ಹಲವು ಜೀವಗಳನ್ನು ಬಲಿ ಪಡೆದಿರುವುದು ಸತ್ಯ.

15. ಬದಲಾಗುವ ಹವಾಮಾನಕ್ಕೆ ತಕ್ಕಂತೆ ವಾಹನಗಳನ್ನು ಮಾರ್ಪಾಡು ಮಾಡಿಕೊಳ್ಳದಿರುವುದು. ವೈಪರ್, ಮಡ್ ಗಾರ್ಡ್‌ಗಳನ್ನು ಅಳವಡಿಸಿಕೊಳ್ಳದಿರುವುದು.

16. ಚಾಲಕರ ಅತಿಯಾದ ಆತ್ಮವಿಶ್ವಾಸ ಮತ್ತು ವೀಲಿಂಗ್ ಸಾಹಸ

ಇವು ಮನುಷ್ಯನ ತಪ್ಪಿನಿಂದಾಗುವ ಅಪಘಾತಗಳಾದರೆ, ಸರ್ಕಾರದ ತಪ್ಪಿನಿಂದಾಗುವ ಅಪಘಾತಗಳ ಸಂಖ್ಯೆಯೂ ಕಡಿಮೆ ಏನಿಲ್ಲ. ರಸ್ತೆಗಳ ಗುಣಮಟ್ಟ ನಿರೀಕ್ಷೆಯಷ್ಟು ಇಲ್ಲ ಎನ್ನುವುದು ಸತ್ಯ. ಹಾಗೆಯೇ ಅವುಗಳ ನಿರ್ವಹಣೆ ನಿರಂತರವಾಗಿ ನಡೆಯುವುದಿಲ್ಲ. ರಸ್ತೆಗಳನ್ನು ನಿರ್ಮಿಸುವಾಗ ಮತ್ತು ಅವುಗಳ ದುರಸ್ತಿ ಮಾಡುವಾಗ ನಿರ್ದಿಷ್ಟ ಮಾನದಂಡ ಬಳಕೆಯಾಗುವುದಿಲ್ಲ. ಕಾಟಾಚಾರಕ್ಕೆ ಅಗುವ ಕೆಲಸಗಳೇ ಹೆಚ್ಚು ಎನ್ನುವ ಅರೋಪದಲ್ಲಿ ಹುರುಳಿಲ್ಲದಿಲ್ಲ. ರಸ್ತೆಗಳನ್ನು ನಿರ್ಮಿಸುವಾಗ ಮತ್ತು ಅವುಗಳ ನಿರ್ವಹಣೆ ಮಾಡುವಾಗ ಪ್ರಚಲಿತ ಮತ್ತು ಮುಂದಿನ ದಿನಗಳಲ್ಲಿ ಅಗುವ ಹವಾಮಾನ ಬದಲಾವಣೆಯನ್ನು ಪರಿಗಣಿಸುವುದಿಲ್ಲ. ಹವಾಮಾನ ಮತ್ತು ವಾಹನ ದಟ್ಟನೆಯ ವೈಪರೀತ್ಯ ಇರುವಾಗ ಏಕರೀತಿಯ ಮಾನದಂಡವನ್ನು ಅಳವಡಿಸಿಕೊಳ್ಳಬಾರದು. ಹೆಚ್ಚು ಮಳೆಯಾಗುವ ಕರಾವಳಿಯ ಮತ್ತು ಮಲೆನಾಡಿನಲ್ಲಿ ಬಯಲು ನಾಡಿನಂತೆ ರಸ್ತೆ ನಿರ್ಮಿಸಲಾಗದು. ಹಾಗೆಯೇ, ದೇವಿಮನೆ, ಆರಬೈಲ್, ಚಾರ್ಮಾಡಿ, ಆಗುಂಬೆ ಮತ್ತು ಶಿರಾಡಿ ಘಾಟ್‌ಗಳಲ್ಲಿ, ಅಲ್ಲಿನ ತಿರುವುಗಳು, ಮಳೆ, ಭೂಕುಸಿತ, ಮಣ್ಣಿನ ಗುಣಗಳನ್ನು ಗಣನೆಗೆ ತೆಗೆದುಕೊಂಡು ರಸ್ತೆ ನಿರ್ಮಾಣ ತಂತ್ರಜ್ಞಾನವನ್ನು ಬದಲಿಸಬೇಕಾಗುತ್ತದೆ. ಮಲೆನಾಡಿನ ರಸ್ತೆಗಳ ಪಕ್ಕದಲ್ಲಿ ಗಿಡಗಳು ರಸ್ತೆಗೆ ಬಾಗುತ್ತಿದ್ದು, ಅವುಗಳು ವಾಹನ ಚಾಲಕರಿಗೆ ರಸ್ತೆಗಳ ವ್ಯೂ ಮಾಡಲು ಅಡ್ಡಿ ಮಾಡುತ್ತವೆ. ಅವುಗಳನ್ನು ವರ್ಷಕ್ಕೆ ಒಂದೆರಡು ಬಾರಿ ಟ್ರಿಮ್ ಮಾಡಬೇಕು ಎನ್ನುವ ನಿಯಮಾವಳಿ ಇದ್ದರೂ, ಅವುಗಳನ್ನು ಮಾಡದೇ ಅಥವಾ ಕಾಲಕ್ಕೆ ಸರಿಯಾಗಿ ಮಾಡದೇ ಮಲೆನಾಡಿನಲ್ಲಿ ಬಹುತೇಕ ವಾಹನ ಅಪಘಾತಗಳಿಗೆ ಕಾರಣವಾಗುತ್ತದೆ ಎನ್ನಲಾಗುತ್ತದೆ. ರಸ್ತೆ ಪಕ್ಕ ಗಟಾರ ಅಥವಾ ಕಾಲುವೆಗಳಲ್ಲಿ ಹೂಳು ತುಂಬಿಕೊಳ್ಳುತ್ತಿದ್ದು, ಅವುಗಳನ್ನು ಸ್ವಚ್ಛಗೊಳಸದೇ ಮಳೆಗಾಲದಲ್ಲಿ ನೀರು ರಸ್ತೆಯ ಮೇಲೆ ಹರಿಯುತ್ತಿದ್ದು, ಇದು ರಸ್ತೆಗಳನ್ನು ಹಾಳು ಮಾಡುವುದರೊಂದಿಗೆ ಬಹುತೇಕ ಅಪಘಾತಗಳಿಗೆ ಕಾರಣವಾಗುತ್ತದೆ. ಗುಣ ಮಟ್ಟದ ರಸ್ತೆ, ರಸ್ತೆ ನಿರ್ವಹಣೆ ಜೊತೆಗೆ ರಸ್ತೆ ಅಪಘಾತಗಳಿಗೆ ಇನ್ನೊಂದು ಕಾರಣ ರಸ್ತೆ ಹೊಂಡಗಳು. ಈ ಸಮಸ್ಯೆ ಇಂದು ಅಂತರಾಷ್ಟ್ರೀಯ ಮಟ್ಟದಲ್ಲಿ ಕುಖ್ಯಾತಿ ಪಡೆದಿದೆ. ಬೆಂಗಳೂರಿನಲ್ಲಂತೂ ಇದು ಬಹುಷ: ನಿತ್ಯ ಸುದ್ದಿಯಾಗಿದೆ. ಟವಿ ಚಾನೆಲ್‌ಗಳು ಮತ್ತು ಪತ್ರಿಕೆಗಳು ಇದರ ಬಗೆಗೆ ಬರೆದು ಸುಸ್ತಾಗಿವೆ. ರಸ್ತೆ ಹೊಂಡಗಳನ್ನು ಮುಚ್ಚುವಲ್ಲಿ ಸರಿಯಾದ ತಂತ್ರಜ್ಞಾನದ ಕೊರತೆಯೋ, ಕಳಪೆ ಕಾಮಗಾರಿಯೋ ರಸ್ತೆಹೊಂಡಗಳ ಸಮಸ್ಯೆ ತಾರ್ಕಿಕ ಅಂತ್ಯವನ್ನು ಕಾಣುತ್ತಿಲ್ಲ. ದುಡಿಮೆಗೆ ಹೊರಗೆ ಹೋದವರು ಗುಂಡಿಗೆ ಬೀಳದೇ ಸುರಕ್ಷಿತ ಮನೆಗೆ ಮರಳಿದರೆ ಸಾಕು ಎನ್ನುವಂತಾಗಿದೆ ಎನ್ನುವ ಟೀಕೆ ಜೋರಾಗಿ ಕೇಳುತ್ತಿದೆ.

ಅಪಘಾತ ತಡೆ ದಿನಾಚರಣೆ ಅಪಘಾತಕ್ಕೆ ಕಾರಣವಾದ ಈ ಎಲ್ಲಾ human error ಮತ್ತು failure of government ಬಗೆಗೆ ಹೆಚ್ಚಿನ ಗಮನ ಕೊಡುವಲ್ಲಿ ಮತ್ತು ಜನರನ್ನು ಈ ನಿಟ್ಟಿನಲ್ಲಿ ಹೆಚ್ಚು ಜಾಗೃತಗೊಳಿಸಲು ಶ್ರಮಿಸಬೇಕು. ಇದು ಸರ್ಕಾರ ಮತ್ತು ಜನರು ಒಟ್ಟಿಗೆ ಸೇರಿ ಮಾಡುವ ಕಾರ್ಯ. ಯಾರೊಬ್ಬರನ್ನು ಹೊಣೆಗಾರರನ್ನಾಗಿ ಮಾಡಲಾಗದು.


# ಯಕ್ಷ ಬಂಡಿಗೆ ಬಂಟರ ಕೊಂಡಿ

## ಯಕ್ಷ ಕ್ಷೇತ್ರದ ಪ್ರಧಾನ ಸ್ತ್ರೀ ಪಾತ್ರಧಾರಿ ಶ್ರೀ ರಾಜೀವ ಶೆಟ್ಟಿ ಹೊಸಂಗಡಿ



ಹೆಚ್. ಶ್ರೀಧರ ಹೆಗ್ಡೆ

ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಗ್ರಾಮೀಣ ಪ್ರದೇಶವಾದ ಹಳ್ಳಿ ಹೊಳೆ ಹವ್ಯಕರ ಸೀಮೆಯ ವಾಟೆ ಬಚ್ಚಲು ಎಂಬಲ್ಲಿ 06.08.1959 ರಂದು ದಿ॥ ಕರಿಯಣ್ಣ ಶೆಟ್ಟಿ ಮತ್ತು ದಿ॥ ಶೇಷಮ್ಮ ಶೆಟ್ಟಿಯವರ ಚತುರ್ಥ ಪುತ್ರನಾಗಿ ಪ್ರಪಂಚದ ಬೆಳಕನ್ನು ಕಂಡು, ಹುಟ್ಟಿ ವರ್ಷದೊಳಗೆ ತಂದೆಯನ್ನು ಕಳೆದುಕೊಂಡು, ಎಡಮೊಗೆಯ ಹೊಸಬಾಳು ಎಂಬಲ್ಲಿ ತಾಯಿ, ಸಹೋದರ, ಸಹೋದರಿಯರೊಂದಿಗೆ ವಾಸ್ತವ್ಯ, ಹೊಸಂಗಡಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 5ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿ ಕಲೆ ಮತ್ತು ಕಲಾವಿದರ ಬಗ್ಗೆ ಅತೀವ ಆಸಕ್ತಿಯುಳ್ಳ ಇವರನ್ನು ಜನಪದ ಯಕ್ಷಗಾನ ಕಲೆ ತನ್ನತ್ತ ಸೆಳೆದುಕೊಂಡಿತು.



ಶ್ರೀ ಕಮಲಶಿಲೆ ಯಕ್ಷಗಾನ ಬಯಲಾಟ ವೀಕ್ಷಿಸುತ್ತಾ ಆ ಮೇಳದ ಮೇಲ್ವಿಚಾರಕರಾದ ದಿ॥ ಆರ್ಗೋಡು ನರಸಿಂಹ ಶಾನುಭೋಗ ಇವರೊಂದಿಗೆ ಉಳಿದು, ಎರಡನೇ ವರ್ಷ ದಿ॥ ಎಮ್.ಎಮ್. ಹೆಗ್ಡೆ ಇವರೊಂದಿಗೆ ತಿರುಗಾಟ ಪೂರೈಸಿ, ಮೂರನೇ ವರ್ಷ ಸ್ತ್ರೀ ಪಾತ್ರಧಾರಿ ಆವರ್ಸೆ ಶೀನ ಮಡಿವಾಳರೊಂದಿಗೆ ಪೆರ್ಡೂರು ಅನಂತ ಪದ್ಮನಾಭ ದಶಾವತಾರ ಯಕ್ಷಗಾನ ಮೇಳದಲ್ಲಿ ಬಾಲ ಗೋಪಾಲ ವೇಷಕ್ಕೆ ಸೇರ್ಪಡೆಗೊಂಡು, ನಾಲ್ಕನೇ ವರ್ಷ ಕೋಟ ಶ್ರೀ ಅಮೃತೇಶ್ವರಿ ಯಕ್ಷಗಾನ ಮಂಡಳಿಯಲ್ಲಿ ಶ್ರೀಧರ ಹಂದೆಯವರ ಮೇಲ್ವಿಚಾರಿಕೆಯಲ್ಲಿ ಮೂರು ವರ್ಷ ಪೀಠಿಕಾ ಸ್ತ್ರೀ ಪಾತ್ರಧಾರಿಯಾಗಿದ್ದು ದಿ॥ ನಾರಾಯಣಪ್ಪ ಉಪ್ಪೂರು, ದಿ॥ ದುರ್ಗಪ್ಪ ಗುಡಿಗಾರ, ದಿ॥ ಕೋಟ ವೈಕುಂಠ, ದಿ॥ ನಗರ ಜಗನ್ನಾಥ ಶೆಟ್ಟಿ, ದಿ॥ ಚಿಟ್ಟಾಣಿ ರಾಮಚಂದ್ರ ಹೆಗ್ಡೆ, ಎಮ್.ಎ. ನಾಯ್ಕ್, ಗೋಡೆ ನಾರಾಯಣ ಹೆಗ್ಡೆ, ದಿ॥ ಸಾಲ್ಕೋಡು ಗಣಪತಿ ಹೆಗ್ಡೆ ಇವರೆಲ್ಲರೊಂದಿಗೆ ಬೆರೆತು ರಂಗದ ಪರಿಕಲ್ಪನೆಯನ್ನು ಪಡೆದು ಏಳನೇ ತಿರುಗಾಟಕ್ಕೆ ಶ್ರೀ ಸೌಕೂರು ದುರ್ಗಾಪರಮೇಶ್ವರಿ ಯಕ್ಷಗಾನ ಬಯಲಾಟ ಮೇಳದ ಮುಖ್ಯ ಸ್ತ್ರೀ ಪಾತ್ರಧಾರಿಯಾಗಿ ಸೇರ್ಪಡೆಗೊಂಡು ದಿ॥ ಶ್ರೀನಿವಾಸ ಭಾಗವತ, ದಿ॥ ಜೋಗಪ್ಪ ಶೆಟ್ಟಿ, ದಿ॥ ಮೊಳಹಳ್ಳಿ ಹಿರಿಯ ನಾಯ್ಕ್, ಬೆಲ್ತೂರು ರಮೇಶ ಇವರೆಲ್ಲರೊಂದಿಗೆ ಬೆರೆತು ಯಶಸ್ವಿ ತಿರುಗಾಟ ಪೂರೈಸಿ ಎಂಟನೇ ವರ್ಷ ದಿ॥ ಪಳ್ಳಿ ಸೋಮನಾಥ ಹೆಗ್ಡೆಯವರ ಯಜಮಾನಿಕೆಯಲ್ಲಿ, ಶ್ರೀ ಗುರು ಪ್ರಸಾದಿತ ಯಕ್ಷಗಾನ ಮಂಡಳಿ ಸಾಲಿಗ್ರಾಮ ಮೇಳಕ್ಕೆ ಸೇರ್ಪಡೆಯಾಗಿ, ದಿ॥ ಕಾಳಿಂಗ ನಾವುಡರೊಂದಿಗೆ ಸತತ 10 ವರ್ಷಗಳ ಅವಿಸ್ಮರಣೀಯ ತಿರುಗಾಟದೊಂದಿಗೆ, ಕಿನ್ನಿಗೋಳಿ ಮುಖ್ಯಪ್ರಾಣ ದಿ॥ ರಾಮ ನಾಯರಿ, ದಿ॥ ವಾಸುದೇವ ಸಾಮಗ, ದಿ॥ ಆರಾಟೆ ಮಂಜುನಾಥ, ದಯಾನಂದ ನಾಗೂರು, ದಿ॥ ಬೆಳಿಯೂರು ಕೃಷ್ಣಮೂರ್ತಿ, ದಿ॥ ಚನ್ನಪ್ಪ ಶೆಟ್ಟಿ, ದಿ॥ ವಿಶ್ವನಾಥ ಶೆಟ್ಟಿ, ಕೃಷ್ಣಯಾಜಿ ಬಳ್ಕೂರು, ಕೊಂಡದಕುಳಿ ರಾಮಚಂದ್ರ ಹೆಗ್ಡೆ, ಹಳ್ಳಾಡಿ ಜಯರಾಮ ಶೆಟ್ಟಿ, ನಾರಾಯಣ ಶಬರಾಯರು, ಹೆರಂಜಾಲು ಗೋಪಾಲ ಗಾಣಿಗ ಪ್ರಸ್ತುತ ಮೇಳದ ವ್ಯವಸ್ಥಾಪಕರಾದ ಶ್ರೀ ಕಿಶನ್ ಕುಮಾರ್ ಹೆಗ್ಡೆ ಇವರೆಲ್ಲರೊಂದಿಗೆ ಸತತ 17 ವರ್ಷ ತಿರುಗಾಟ ಪೂರೈಸಿ, ತದನಂತರ ಸತತ 19 ವರ್ಷಗಳ ತಿರುಗಾಟವನ್ನು ಮಂದಾರ್ತಿ ಶ್ರೀ ದುರ್ಗಾಪರಮೇಶ್ವರಿ ದಶಾವತಾರ ಯಕ್ಷಗಾನ ಮಂಡಳಿಯಲ್ಲಿ ಸೇವೆ ಸಲ್ಲಿಸಿ, ಸುದೀರ್ಘ 43 ವರ್ಷಗಳ ಯಕ್ಷಗಾನದ ವೃತ್ತಿ ಜೀವನಕ್ಕೆ ವಿದಾಯ ಹೇಳಿ, ಕೃಷಿ ಚಟುವಟಿಕೆಯಲ್ಲಿ ತನ್ನನ್ನು ತಾನು ತೊಡಗಿಸಿಕೊಂಡು, ವಿರಾಮದ ಸಮಯದಲ್ಲಿ ಅತಿಥಿ ಕಲಾವಿದನಾಗಿ ಯಕ್ಷಗಾನಕ್ಕೆ ತನ್ನಿಂದಾದ ಕಲಾ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

ಸ್ತ್ರೀಯರನ್ನು ನಾಚಿಸುವ ಬೆಡಗುಬಿನ್ನಾಣ, ವನಪು-ವೈಯಾರ, ವೇಷ-ಭೂಷಣ, ಹಾವ-ಭಾವ, ನೃತ್ಯ-ಅರ್ಥಗಳೊಂದಿಗೆ ಸಂದರ್ಭೋಚಿತಕ್ಕನುಗುಣವಾಗಿ ನವರಸ ಶೋಭಿತ ನುರಿತ ಸಮರ್ಥ ಪ್ರಧಾನ ಸ್ತ್ರೀ

ಭೂಮಿಕೆಯಲ್ಲಿ ಮಿಂಚಿದ ಮೇರು ನಟ. ಹಳೆಯ ಪ್ರಸಂಗದ ಸುಧನ್ವ ಕಾಳಗದ ಕುವಲೆ ಪಾತ್ರದಿಂದ ಪ್ರಾರಂಭಿಸಿ, ಪ್ರಭಾವತಿ, ಸುಗರ್ಭೆ ಹಾಗೆಯೇ ಚಿತ್ರಾಂಗದೆ, ಪ್ರಮೀಳೆ, ಮೀನಾಕ್ಷಿ, ಶಶಿಪ್ರಭೆ, ಕೈಕೆಯಿ, ದಾಕ್ಷಾಯಿಣಿ, ಅಂಬೆ, ದ್ರೌಪದಿ, ಸೈರಂಧ್ರಿ, ಚಂದ್ರಮತಿ, ದಮಯಂತಿ, ಶಾಕುಂತಲೆ, ಅಲೋಲಿಕೆ, ಸತ್ಯಭಾಮೆ, ರುಕ್ಮಿಣಿ, ಮೇನಕೆ, ಯೋಜನಾಗಂಧಿ ಹಾಗೂ ಶ್ರೀ ಕೃಷ್ಣ ಹೀಗೆ ಹತ್ತು ಹಲವು ಪೌರಾಣಿಕ ಪ್ರಸಂಗಗಳಲ್ಲಿ ಹೆಸರುಗಳಿಸಿ, ಹೊಸ ಪ್ರಸಂಗದ ನಾಗಶ್ರೀ, ಚಿತ್ರಾವತಿ, ರತಿರೇಖಾ, ಕಾಮಿನಿ, ಶುಭದ ಹೀಗೆ ಅನೇಕ ಪಾತ್ರಧಾರಿಯಾಗಿ ಸೇವೆ ಸಲ್ಲಿಸಿ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರರಾಗಿರುತ್ತಾರೆ. ಹಲವಾರು ಸಂಘ–ಸಂಸ್ಥೆಗಳಿಂದ ಶ್ರೀಯುತರಿಗೆ ಸನ್ಮಾನ–ಪುರಸ್ಕಾರ ಪ್ರಶಸ್ತಿಗಳು ಲಭಿಸಿರುತ್ತವೆ.

ಯಕ್ಷಗಾನ ನಿವೃತ್ತ ಜೀವನದಲ್ಲಿ ಶಾಶ್ವತ ಆನಂದಕ್ಕಾಗಿ ಕೃಷಿಯನ್ನು ಆಯ್ಕೆ ಮಾಡಿ, ಸುಮ್ಮನೆ ಸಮಯದ, ಧನದ ಅಪವ್ಯತ ಮಾಡದೆ, ಸುಪ್ತ ವಿವೇಕ, ವೈರಾಗ್ಯಗಳನ್ನು ಬಡಿದೆಬ್ಬಿಸಲು ಭದ್ರವಾದ ನಿಷ್ಠೆ, ಸದೃಢ ಸಂಕಲ್ಪ ತೊಟ್ಟು, ತೀಕ್ಷ್ಣ ಗಮನದೊಂದಿಗೆ, ಸ್ವಪ್ರಯತ್ನದಿಂದ ತೀರದ ಆನಂದಗಳಿಸಿ ಹಿಗ್ಗಲೇ ಬೇಕೆನ್ನುವ ದೃಢ ನಿಶ್ಚಯಗಳಿಗೆ ಮನ ಮಾಡಿಯೇ ಶತಪಥ ಪ್ರಯತ್ನಿಸುವ ಎಂಟೆದೆ ಬಂಟ ಎಂದರೆ ಉತ್ಪ್ರೇಕ್ಷೆಯಾಗಲಾರದು.

"ಸ್ತ್ರೀ ಪುಣ್ಯ ಪುರುಷ ಭಾಗ್ಯ" ಎಂಬಂತೆ ಈ ಸ್ತ್ರೀ ಪಾತ್ರಧಾರಿಯ ಯಶಸ್ಸಿನ ಹಿಂದೆ ಕೈಹಿಡಿದ ಧರ್ಮಪತ್ನಿ ಸದ್ಗ್ರಹಿಣಿ, ಮನೆಯಲ್ಲಿ ಸದಾ ಅರಳುತ್ತಿರುವ ಶ್ರೀಮತಿ ಕುಸುಮ, ಇವರೀರ್ವರ ಕರುಳ ಕುಡಿಗಳಾಗಿ ಪ್ರಥಮ ಪುತ್ರ ಹರೀಶ್ ಶೆಟ್ಟಿಯವರು ನಿವೇದಿತರ ಕೈಹಿಡಿದರೆ, ದ್ವಿತೀಯ ಪುತ್ರ ಗಣೇಶ ಶೆಟ್ಟಿ ಹೋಟೆಲ್ ವ್ಯವಹಾರಸ್ಥರಾಗಿದ್ದು, ಏಕೈಕ ಪುತ್ರಿ ಅನುಸೂಯರವರು ಖಾಸಗಿ ಕಂಪೆನಿಯೊಂದರ ಉದ್ಯೋಗಿಯಾಗಿದ್ದು ಪತಿ ಶ್ರೀ ನಿಶ್ಚಿತ್ ನಾಯಕ್‌ರೊಂದಿಗೆ ಬೆಂಗಳೂರಿನಲ್ಲಿ ನೆಲೆಸಿರುತ್ತಾರೆ. ಶ್ರೀ ಶೆಟ್ಟರಿಗೆ ಯಕ್ಷಮಾತೆ ಶ್ರೀ ದುರ್ಗಾಪರಮೇಶ್ವರೀ ದೇವಿಯು ಸಕಲ ಸುಖ ಸೌಭಾಗ್ಯ ಆಯುರಾರೋಗ್ಯ ಕರುಣಿಸಲೆಂದು ಪ್ರಾರ್ಥಿಸುತ್ತೇನೆ.

# Bunts' Sangha RNS Evening College Report – Industrial Visit



The students of B.Com stream of BSRNS Evening College had an opportunity to visit the System Rack Technologies located at Tumkur of Karnataka state on 26th November as part of their study process. The journey began at 9:30 am from the campus and reached the venue at around 12:15 pm. The Management of System Rack Technologies extended a warm welcome by offering each one of them with a welcome drink which boost their energy. The students were taken to various manufacturing units wherein one Mr. Chandrashekhar, the Head of Purchase Department explained the process of manufacturing of sheet metal products, bending, welding, phosphating and powder coating to prevent the metal from rusting. The students had a series of questions and the personnel replied in a convincing manner. The students expressed their gratitude to each one of them for enriching their theoretical learning with that of practical implications. The students returned to the campus with a word of satisfaction. On the whole, the students spent the day completely on a productive note.

# ಬಂಟರ ಸಂಘ ಬೆಂಗಳೂರು

## ಕ್ರೀಡಾ ವಿಭಾಗ

## ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಕ್ರೀಡಾಕೂಟ – 2022–23

**ಅತ್ಮೀಯ ಸದಸ್ಯರೇ,**

2022–23ನೇ ಸಾಲಿನ 'ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಕ್ರೀಡಾಕೂಟ'ಕ್ಕೆ ತಮ್ಮೆಲ್ಲರನ್ನೂ ಆತ್ಮೀಯವಾಗಿ ಆಹ್ವಾನಿಸುತ್ತಿದ್ದೇವೆ. ಸದಸ್ಯರೆಲ್ಲರೂ ಕ್ರೀಡಾ ಮನೋಭಾವದಿಂದ ತಮ್ಮ ಕುಟುಂಬ ಸದಸ್ಯರೊಂದಿಗೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕ್ರೀಡಾಕೂಟವನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿಸುತ್ತಿದ್ದೇವೆ.

## ಕ್ರೀಡಾಕೂಟದ ವಿವರ

| | | | |
|---|---|---|---|
| ಜನವರಿ 7 ಮತ್ತು 8 ಶನಿವಾರ ಮತ್ತು ಭಾನುವಾರ | ಕ್ರಿಕೆಟ್ | ಬೆಳಿಗ್ಗೆ 8.00ಕ್ಕೆ | ಹೆಚ್.ಎಂ.ಟಿ. ಮೈದಾನ, ಜಾಲಹಳ್ಳಿ |
| ಜನವರಿ 8 ಭಾನುವಾರ | ತ್ರೋಬಾಲ್ | ಬೆಳಿಗ್ಗೆ 8.00ಕ್ಕೆ | ಹೆಚ್.ಎಂ.ಟಿ. ಮೈದಾನ, ಜಾಲಹಳ್ಳಿ |
| ಜನವರಿ 22 ಭಾನುವಾರ | ಶಟಲ್ ಬ್ಯಾಡ್ಮಿಂಟನ್ | ಬೆಳಿಗ್ಗೆ 8.30ಕ್ಕೆ | ಸಿಲಿಕಾನ್ ಅರೈಸ್ ಬ್ಯಾಡ್ಮಿಂಟನ್ ಅಕಾಡೆಮಿ, ಅಂಜನಾಪುರ |

ಬೆಂಗಳೂರು ಬಂಟರ ಸಂಘದ 2022–23ನೇ ಸಾಲಿನ ಎಲ್ಲಾ ವಾರ್ಷಿಕ ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಲು ಇಚ್ಛಿಸುವವರು ಕಡ್ಡಾಯವಾಗಿ ಸಂಘದ ಸದಸ್ಯರಾಗಿದ್ದು ಸಮಾಜ ಬಾಂಧವರೆಲ್ಲರೂ ಸಹಕರಿಸಬೇಕಾಗಿ ವಿನಂತಿ.

**ಆನಂದರಾಮ ಶೆಟ್ಟಿ ಬಿ.**
ಗೌರವ ಕಾರ್ಯದರ್ಶಿ

**ಎಂ. ಮುರಲೀಧರ ಹೆಗ್ಡೆ**
ಅಧ್ಯಕ್ಷರು

**ನಿತ್ಯರಂಜನ್ ಹೆಗ್ಡೆ**
ಸಂಚಾಲಕರು, ಕ್ರೀಡಾ ಸಮಿತಿ
ಮೊ : 9945685277

**ಕಿರಣ್ ಕುಮಾರ್ ಶೆಟ್ಟಿ ಎಂ.**
ಚೇರ್‌ಪರ್ಸನ್, ಕ್ರೀಡಾ ಸಮಿತಿ
ಮೊ : 9945233387

**ಸೂಚನೆ :**

- ವಾಲಿಬಾಲ್ ಪಂದ್ಯಾವಳಿಗೆ ಹೆಸರು ನೋಂದಾಯಿಸಲು ಕೊನೆಯ ದಿನಾಂಕ : 05.12.2022ನೇ ಸೋಮವಾರ ಸಂಜೆ 5.30
- ಕ್ರಿಕೆಟ್ : ಹೆಸರು ನೋಂದಾಯಿಸಲು ಕೊನೆಯ ದಿನಾಂಕ : 25.12.2022ನೇ ಆದಿತ್ಯವಾರ ಸಂಜೆ 5.30
- ತ್ರೋಬಾಲ್‌ಗೆ ಹೆಸರು ನೋಂದಾಯಿಸಲು ಕೊನೆಯ ದಿನಾಂಕ : 29.12.2022ನೇ ಆದಿತ್ಯವಾರ ಸಂಜೆ 5.30

**ಹೆಚ್ಚಿನ ಮಾಹಿತಿಗಾಗಿ ಕ್ರೀಡಾ ಸಮಿತಿಯ ಈ ಕೆಳಕಂಡ ಸದಸ್ಯರನ್ನು ಸಂಪರ್ಕಿಸಬಹುದು.**

| | | | | | |
|---|---|---|---|---|---|
| ಅಖಿಲಾ ಶೆಟ್ಟಿ | 8746924286 | ಅಶ್ವಿನಿ ಶೆಟ್ಟಿ | 7795199583 | ದೀಕ್ಷಾ ಶೆಟ್ಟಿ | 7022089750 |
| ಹರೀಶ್ ಶೆಟ್ಟಿ | 9900133200 | ಕುಶಲ್ ಶೆಟ್ಟಿ | 9448018245 | ನವೀನ್ ಶೆಟ್ಟಿ | 9844226700 |
| ಪ್ರವೀಣ್ ಶೆಟ್ಟಿ | 9880546073 | ಪ್ರೇಮಾನಂದ ಶೆಟ್ಟಿ | 8123035590 | ರಾಜೇಶ್ ಶೆಟ್ಟಿ | 9880389197 |
| ರಾಮಕೃಷ್ಣ ಶೆಟ್ಟಿ | 9980225041 | ರತನ್ ಶೆಟ್ಟಿ | 9880882852 | ಸಂತೋಷ್ ಶೆಟ್ಟಿ ಬಿ. | 9663379394 |
| ಸಂತೋಷ್ ಶೆಟ್ಟಿ | 9880866754 | ಮಹೇಂದ್ರ ಶೆಟ್ಟಿ | 7019321009 | ಸುದರ್ಶನ್ ರೈ | 9902899123 |
| ಸುಕೇಶ್ ಶೆಟ್ಟಿ | 9845953035 | ಸುಕುಮಾರ್ ಶೆಟ್ಟಿ | 9686199225 | ಸುನೀಲ್ ಶೆಟ್ಟಿ | 7829294343 |
| ಉತ್ತಮ್ ಶೆಟ್ಟಿ | 9845188727 | ಯಶವಂತ್ ರೈ | 8792223222 | | |

## ಕ್ರಿಕೆಟ್

ಸ್ಥಳ : ಹೆಚ್.ಎಂ.ಟಿ. ಮೈದಾನ, ಜಾಲಹಳ್ಳಿ.
ದಿನಾಂಕ : 07.01.2023 ಶನಿವಾರ ಮತ್ತು 08.01.2023 ಭಾನುವಾರ
ಪ್ರವೇಶ ಶುಲ್ಕ : ರೂ. 10,000/– ಪ್ರತಿ ತಂಡಕ್ಕೆ.
ಹೆಸರು ನೊಂದಾಯಿಸಲು ಕೊನೆಯ ದಿನಾಂಕ : 25.12.2022ನೇ ಆದಿತ್ಯವಾರ ಸಂಜೆ 5.30
ಡ್ರಾ ನಿಗದಿಯನ್ನು ಸ್ಪರ್ಧೆಯ ಒಂದು ವಾರದ ಮುಂಚೆ ತಿಳಿಸಲಾಗುವುದು

**ಪಂದ್ಯದ ನಿಯಮ :**

1. ಯಾವುದೇ ವಯೋಮಿತಿಯ ಮಾನದಂಡ ಇಲ್ಲ.
2. ಬೆಂಗಳೂರು ಬಂಟರ ಸಂಘದ ಸದಸ್ಯರು ಮತ್ತು ಅವರ ಮಕ್ಕಳಿಗೆ ಮಾತ್ರ ಆಡಲು ಅವಕಾಶ. ಅಗತ್ಯ ಬಿದ್ದಲ್ಲಿ ತಂಡದ ಆಟಗಾರರ ಸದಸ್ಯತ್ವ ಧೃಡೀಕರಣ ಪುರಾವೆಯನ್ನು ಯಾವುದೇ ಸಂದರ್ಭದಲ್ಲಿ ಒದಗಿಸತಕ್ಕದ್ದು.
3. ತಂಡದಲ್ಲಿ ಸಂಘದ ಸದಸ್ಯೇತರ ಆಟಗಾರರು ಕಂಡು ಬಂದಲ್ಲಿ ಯಾವುದೇ ಹಂತದಲ್ಲಿ ಯಾವುದೇ ಮುನ್ಸೂಚನೆಯಿಲ್ಲದೇ ತಂಡವನ್ನು ಅನರ್ಹಗೊಳಿಸಲಾಗುವುದು ಹಾಗೂ ಅನರ್ಹಗೊಂಡ ತಂಡದ ಪ್ರವೇಶ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ.
4. ತಂಡದ ನೋಂದಣಿ ಮಾಡುವಾಗ ಎಲ್ಲಾ 14 ಆಟಗಾರರ ಹೆಸರು, ಸದಸ್ಯತ್ವ ಸಂಖ್ಯೆ ಮತ್ತು ದೂರವಾಣಿ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸಿರಬೇಕು.
5. ಪ್ರತಿಯೊಂದು ತಂಡದವರು ತಮ್ಮ ಸ್ವಂತ ಬ್ಯಾಟ್‌ಗಳನ್ನು ಹೊಂದಿರಬೇಕು.
6. ಯಾವುದೇ ರೀತಿಯ ಸಲಹೆ ಸೂಚನೆ ಅಥವಾ ದೂರುಗಳಿದ್ದಲ್ಲಿ ಕ್ರೀಡಾ ಸಮಿತಿಯ ಗಮನಕ್ಕೆ ತರಬೇಕಾಗುವುದು.

ಅರ್ಜಿ ನಮೂನೆಯನ್ನು ಬಂಟರ ಸಂಘದ ವೆಬ್‌ಸೈಟ್ (www.buntsanghablr.com) ಅಥವಾ ಕಛೇರಿಯಲ್ಲಿ ಪಡೆದುಕೊಳ್ಳಬಹುದಾಗಿದೆ.

ಕ್ರೀಡಾ ಸಮಿತಿಯು ಕೈಗೊಳ್ಳುವ ನಿರ್ಧಾರವೇ ಅಂತಿಮ.

# ತ್ರೋಬಾಲ್ : ಮಹಿಳೆಯರಿಗೆ

| | | |
|---|---|---|
| ಸ್ಥಳ | : | ಹೆಚ್.ಎಂ.ಟಿ. ಮೈದಾನ ಜಾಲಹಳ್ಳಿ. |
| ದಿನಾಂಕ | : | 08.01.2023ನೇ ಭಾನುವಾರ, ಬೆಳಿಗ್ಗೆ 10.00 |
| ಪ್ರವೇಶ ಶುಲ್ಕ | : | ಪ್ರತಿ ತಂಡಕ್ಕೆ ರೂ.1500/– |
| ಹೆಸರು ನೊಂದಾಯಿಸಲು ಕೊನೆಯ ದಿನಾಂಕ | : | 29.12.2022ನೇ ಆದಿತ್ಯವಾರ ಸಂಜೆ 5.30 |

ಡ್ರಾ ನಿಗದಿಯನ್ನು ಸ್ಪರ್ಧೆಯ ಒಂದು ವಾರದ ಮುಂಚೆ ತಿಳಿಸಲಾಗುವುದು

**ಪಂದ್ಯದ ನಿಯಮಗಳು :**

1. ಯಾವುದೇ ವಯೋಮಿತಿಯ ಮಾನದಂಡ ಇಲ್ಲ.
2. ಬೆಂಗಳೂರು ಬಂಟರ ಸಂಘದ ಸದಸ್ಯರು ಮತ್ತು ಅವರ ಮಕ್ಕಳಿಗೆ ಮಾತ್ರ ಆಡಲು ಅವಕಾಶ. ಅಗತ್ಯ ಬಿದ್ದಲ್ಲಿ ತಂಡದ ಆಟಗಾರರ ಸದಸ್ಯತ್ವ ಧೃಡೀಕರಣ ಪುರಾವೆಯನ್ನು ಯಾವುದೇ ಸಂದರ್ಭದಲ್ಲಿ ಒದಗಿಸತಕ್ಕದ್ದು.
3. ತಂಡದಲ್ಲಿ ಒಟ್ಟು 7+3 ಆಟಗಾರರು ಮಾತ್ರ ಇರುತ್ತಾರೆ.

ಅರ್ಜಿ ನಮೂನೆಯನ್ನು ಬಂಟರ ಸಂಘದ ವೆಬ್‌ಸೈಟ್ (www.buntsanghablr.com) ಅಥವಾ ಕಛೇರಿಯಲ್ಲಿ ಪಡೆದುಕೊಳ್ಳಬಹುದಾಗಿದೆ.

ಯಾವುದೇ ರೀತಿಯ ಸಲಹೆ ಸೂಚನೆ ಅಥವಾ ದೂರುಗಳಿದ್ದಲ್ಲಿ ಕ್ರೀಡಾ ಸಮಿತಿಯ ಗಮನಕ್ಕೆ ತರಬೇಕಾಗುವುದು. ಕ್ರೀಡಾ ಸಮಿತಿಯು ಕೈಗೊಳ್ಳುವ ನಿರ್ಧಾರವೇ ಅಂತಿಮ.

# ಶಟಲ್ ಬ್ಯಾಡ್ಮಿಂಟನ್

| | | |
|---|---|---|
| ಸ್ಥಳ | : | ಸಿಲಿಕಾನ್ ಅರ್ರೈಸ್ ಬ್ಯಾಡ್ಮಿಂಟನ್ ಅಕಾಡೆಮಿ, ಅಂಜನಾಪುರ, ಬೆಂಗಳೂರು–560062 |
| ದಿನಾಂಕ | : | 22.01.2023ನೇ ಭಾನುವಾರ, ಬೆಳಿಗ್ಗೆ 8.30ಕ್ಕೆ |
| ಪ್ರವೇಶಶುಲ್ಕ | : | ರೂ. 200/– ಸಿಂಗಲ್ಸ್ |
| | | ರೂ. 300/– ಡಬಲ್ಸ್ |

ಹೆಸರು ನೊಂದಾಯಿಸಲು ಕೊನೆಯ ದಿನಾಂಕ: 18.01.2023 ನೇ ಬುಧವಾರ ಸಂಜೆ 5.30ಕ್ಕೆ

**ವಯೋಮಿತಿ**

| | | |
|---|---|---|
| 15 ವರ್ಷದ ಒಳಗಿನವರಿಗೆ | : | ಸಿಂಗಲ್ಸ್ / ಡಬಲ್ಸ್ |
| 15–32 ವರ್ಷ ಒಳಗಿನವರಿಗೆ | : | ಸಿಂಗಲ್ಸ್ / ಡಬಲ್ಸ್ |
| 32–50 ವರ್ಷ ಒಳಗಿನವರಿಗೆ | : | ಸಿಂಗಲ್ಸ್ / ಡಬಲ್ಸ್ |
| 50 ವರ್ಷ ಮೇಲ್ಪಟ್ಟು | : | ಸಿಂಗಲ್ಸ್ / ಡಬಲ್ಸ್ |
| ಮಿಕ್ಸ್‌ಡ್‌ಡಬಲ್ಸ್ | : | ಎಲ್ಲಾ ವಯೋಮಿತಿಯವರಿಗೂ ಮುಕ್ತ |

(Open for all age group)

**ಸೂಚನೆ :**

1. ಎಲ್ಲಾ ವಯೋಮಿತಿಯ ಪುರುಷ ಹಾಗೂ ಮಹಿಳೆಯರಿಗೆ ಪ್ರತ್ಯೇಕ ಸ್ಪರ್ಧೆ.
2. ಪ್ರತಿ ವಯೋಮಿತಿಯಲ್ಲೂ ಕನಿಷ್ಠ 4 ಸ್ಪರ್ಧಿ / ತಂಡಗಳ ಪ್ರವೇಶ ಇರಲೇಬೇಕು.
3. ಪ್ರತಿಯೊಬ್ಬ ಸ್ಪರ್ಧಿಗಳು ತಮ್ಮ ವಯೋಮಿತಿಗೆ ಅನುಗುಣವಾಗಿ ಭಾಗವಹಿಸಬೇಕು/ ಅಗತ್ಯವಿದ್ದಲ್ಲಿ ಜನನ ದಿನಾಂಕ ಪ್ರತಿಯನ್ನು ತೋರಿಸತಕ್ಕದ್ದು.
4. ಕಡ್ಡಾಯವಾಗಿ ಸ್ಥಳದಲ್ಲಿ ಯಾವುದೇ ಪ್ರವೇಶವನ್ನು ಸ್ವೀಕರಿಸಲಾಗುವುದಿಲ್ಲ. (No Spot Entry for both Gents and Ladies)
5. ಹೆಸರು ನಮೂದಿಸುವಾಗ ಕಡ್ಡಾಯವಾಗಿ ಸದಸ್ಯತ್ವ ಸಂಖ್ಯೆಯನ್ನು ಕೊಡತಕ್ಕದ್ದು.
6. ಡಬಲ್ಸ್ & ಮಿಕ್ಸಡ್ ಡಬಲ್ಸ್ ಸ್ಪರ್ಧೆಗೆ ಸಂಪೂರ್ಣ ತಂಡದ ವಿವರವನ್ನು ನಿಗದಿಪಡಿಸಿದ ದಿನಾಂಕದೊಳಗೆ ಕೊಡಬೇಕು.

**ಪಂದ್ಯಾವಳಿಯ ನಿಯಮಾವಳಿಗಳನ್ನು ವೇಳಾಪಟ್ಟಿ ದಿನದಂದು ನೀಡಲಾಗುವುದು.**

**ಆನಂದರಾಮ ಶೆಟ್ಟಿ ಬಿ.**
ಗೌರವ ಕಾರ್ಯದರ್ಶಿ

**ಎಂ. ಮುರಲೀಧರ ಹೆಗ್ಡೆ**
ಅಧ್ಯಕ್ಷರು

**ನಿತ್ಯರಂಜನ್ ಹೆಗ್ಡೆ**
ಸಂಚಾಲಕರು, ಕ್ರೀಡಾ ಸಮಿತಿ
**ಮೊ : 99456 85277**

**ಕಿರಣ್ ಕುಮಾರ್ ಶೆಟ್ಟಿ ಎಂ.**
ಚೇರ್‌ಪರ್ಸನ್, ಕ್ರೀಡಾ ಸಮಿತಿ
**ಮೊ : 99452 33387**

**ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಮತ್ತು ಕ್ರೀಡಾ ಸಮಿತಿ ಸದಸ್ಯರು**



# ಅಭಿನಂದನೆಗಳು

ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತೆ, ಅಂತಾರಾಷ್ಟ್ರೀಯ ಅಥ್ಲೆಟ್ ಕುಮಾರಿ ಅಶ್ವಿನಿ ಅಕ್ಕುಂಜೆಯವರಿಗೆ ಕ್ರೀಡಾ ಕ್ಷೇತ್ರದಲ್ಲಿನ ಜೀವಮಾನ ಸಾಧನೆಗಾಗಿ ಭಾರತ ಸರಕಾರವು ಪ್ರತಿಷ್ಠಿತ ಮೇಜರ್ ಧ್ಯಾನ್ ಚಂದ್ ಖೇಲ್ ರತ್ನ ಪ್ರಶಸ್ತಿ ನೀಡಿ ಗೌರವಿಸಿದೆ. ಪ್ರಸ್ತುತ ಇವರು Sport Authority of India ದಲ್ಲಿ ತರಬೇತುದಾರರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರಿಗೆ ಬಂಟರ ಸಂಘದ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳು.

ಬಂಟರ ಸಂಘ ಬೆಂಗಳೂರು

# ವಿವಾಹ ವೇದಿಕೆ ಸಮಿತಿ

